ವಿಜಯಪುರ | ಸಂಪುಟ 04 | ಸಂಚಿಕೆ 245 | ಪುಟ 04 | ₹ 3.00

https://udayarashminews.com

udayarashmi 90088 88340

ಉದಯ ರಶ್ಮಿ

Udayarashmi Kannada Daily

ಜನಪರ-ಜೀವಪರ

ಕನ್ನಡ ದಿನಪತ್ರಿಕೆ

ಸಂಪಾದಕ : ಇಂದುಶೇಖರ ಮಣೂರ

Editor: Indushekhar Manur

editor.udayarashmi@gmail.com

RNI NO: KARKAN/2023/86203

ಮಂಗಳವಾರ, ನವೆಂಬರ್ 24, 2026

"ಶಂಕರ್ ಬಿದರಿ ಓರ್ವ ಅಪ್ಪಟ ಸುಳ್ಳುಗಾರ. ಬಸವಣ್ಣನವರನ್ನು ಹೀಯಾಳಿಸಿರುವ ವ್ಯಕ್ತಿ ಜೊತೆ ಕೈಜೋಡಿಸಿರುವ ಇವರು, ವೀರಶೈವ ಮಹಾಸಭೆ ರಾಜ್ಯಾಧ್ಯಕ್ಷ ಸ್ಥಾನಕ್ಕೆ ರಾಜೀನಾಮೆ ಕೊಟ್ಟು ತಮ್ಮ ಮರ್ಯಾದೆ ಉಳಿಸಿಕೊಳ್ಳುವ ಕನಿಷ್ಟ ಸೌಜನ್ಯವೂ ಇಲ್ಲದೆ ಅಸಂಬದ್ಧವಾಗಿ ಮಾತನಾಡುತ್ತಾರೆ. ಇಂತಹ ಹೀನ ಮನಸ್ಸಿನ ವ್ಯಕ್ತಿಯಿಂದ ನಮ್ಮ ಸಮಾಜಕ್ಕೆ ಉಪದೇಶದ ಅವಶ್ಯಕತೆಯಿಲ್ಲ."



■ ಎಂ.ಜಿ.ಪಾಟೀಲ

ವಿಜಯಪುರ ಜಿಲ್ಲಾ ಉಸ್ತುವಾರಿ ಸಚಿವರು



ಕನ್ನಡ ಉಳಿಸಿ–ಬೆಳೆಸುವ ಕಾರ್ಯ ಪ್ರತಿಯೊಬ್ಬರೂ ಮಾಡೋಣ

■ ಉದಯರಶ್ಮಿ ದಿನಪತ್ರಿಕೆ

ಅಮ್ಮ ಫೌಂಡೇಶನ್ ರಾಜ್ಯಮಟ್ಟದ ಸಿರಿಗನ್ನಡ ಸಂಭ್ರಮ । ಪುಸ್ತಕ ಬಿಡುಗಡೆ । ಸಾಧಕರಿಗೆ ಪ್ರಶಸ್ತಿ ಪ್ರದಾನ । ಹೃದ್ರೋಗ ತಜ್ಞೆ ಡಾ.ವಿ-ಜಯಲಕ್ಷ್ಮಿ ಬಾಳೆಕುಂದ್ರಿ ಕರೆ

ವಿಜಯಪುರ: ತಾಯಿಯ ಸ್ಮರಣೆಯಲ್ಲಿ ಕನ್ನಡ ಭಾಷೆಯ ಅಸ್ಮಿತೆಗೆ ಸಾಕ್ಷಿಯಾದ ಅಮ್ಮ ಫೌಂಡೇಶನ್ ಕಾರ್ಯ ಶ್ಲಾಘನೀಯ, ಮಾತೃ ಪ್ರೀತಿಯ ಕನ್ನಡ ಭಾಷೆ ಉಳಿಸಿ ಬೆಳೆಸುವ ಕಾರ್ಯ ಪ್ರತಿಯೊಬ್ಬರೂ ಮಾಡಬೇಕೆಂದು ಬೆಂಗಳೂರಿನ ಖ್ಯಾತ ಹೃದ್ರೋಗ ತಜ್ಞೆ ಡಾ. ವಿಜಯಲಕ್ಷ್ಮಿ ಬಾಳೆಕುಂದ್ರಿ ಹೇಳಿದರು.

ನಗರದ ಕಂದಗಲ್ ಹನುಮಂತರಾಯ ರಂಗಮಂದಿರದಲ್ಲಿ ಅಮ್ಮ ಫೌಂಡೇಶನ್ ವತಿಯಿಂದ ಹಮ್ಮಿಕೊಂಡ ರಾಜ್ಯಮಟ್ಟದ ಸಿರಿಗನ್ನಡ ಸಂಭ್ರಮ, ಪುಸ್ತಕ ಬಿಡುಗಡೆ ಹಾಗೂ ಸಾಧಕ–ರಿಗೆ ಪ್ರಶಸ್ತಿ ಪ್ರದಾನ ಸಮಾರಂಭ ಉದ್ಘಾಟಿಸಿ ಮಾತನಾಡಿದ ಅವರು, ಸಾವಿರಾರು ವರ್ಷಗಳ ಇತಿಹಾಸವಿರುವ ನಮ್ಮ ಕನ್ನಡ ಭಾಷೆ ಪರಕೀಯರ ಭಾಷೆಯ ಮೋಹದಿಂದ ನಲಗುತ್ತಿದೆ. ಕನ್ನಡವನ್ನು ತಾಯಿಗಿಂತ ಹೆಚ್ಚಾಗಿ ಪ್ರೀತಿಸಿ, ಗೌರವಿಸಿ, ಉಳಿಸಿ, ಬೆಳೆಸುವ ಕಾರ್ಯ ಮಾಡೋಣ ಎಂದರು.

ವಿಧಾನಪರಿಷತ್ ಸದಸ್ಯ ಸುನೀಲಗೌಡ ಪಾಟೀಲ ಮಾತನಾಡಿ, ಇಂಗ್ಲೀಷ ವ್ಯಾಮೋಹದಿಂದ ಕನ್ನಡತನಕ್ಕೆ ದಕ್ಕೆ ಬರುತ್ತಿದೆ. ಮಕ್ಕಳಿಗೆ ಕನ್ನಡ ಪ್ರೀತಿ ಬೆಳೆಸಬೇಕು. ಕನ್ನಡತನಕ್ಕೆ ಗೌರವ ಕೊಡುವ ಕಾರ್ಯ ಎಲ್ಲರಿಂದಲೂ ಆಗಬೇಕೆಂದು ಕರೆ ನೀಡಿದರು.

ಸಾಹಿತಿ ಬಸವರಾಜ ಹುಬ್ಬಳ್ಳಿಯವರ ಭಾವಗಳ ಪಯಣ ಪುಸ್ತಕ ಬಿಡುಗಡೆಗೊಳಿಸಿ ಮಾತನಾಡಿದ ಕಲಬುರಗಿ ಲೋಕಾಯುಕ್ತ ಡಿವೈಎಸ್‌ಪಿ ಡಾ. ಬಸವರಾಜ ಯಲಿಗಾರ, ಕನ್ನಡ ಸಾಹಿತ್ಯಕ್ಕೆ ತನ್ನದೇ ಆದ ಶ್ರೇಷ್ಠತೆ ಹೊಂದಿದೆ. ಭಾವಗಳ ಪಯಣ ಪುಸ್ತಕದಲ್ಲಿ ಅದು ಅನಾವರಣಗೊಂಡಿದೆ. ಲೇಖಕರು ಪ್ರಭುದ್ಧತೆಯಿಂದ ಕಾವ್ಯರಚನೆ ಮಾಡಿದ್ದಾರೆ ಎಂದರು.

ಮುಖ್ಯ ಅತಿಥಿಯಾಗಿ ಪಾಲ್ಗೊಂಡಿದ್ದ ಕರ್ನಾಟಕ ರಾಜ್ಯ ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ರಾಜ್ಯಾಧ್ಯಕ್ಷ ಚಂದ್ರಶೇಖರ ನುಗ್ಗಲಿ ಮಾತನಾಡಿ, ವಿವಿಧ ಕ್ಷೇತ್ರದ ವಿಶಿಷ್ಠ ಸಾಧಕರನ್ನು ಗುರುತಿಸಿ ಪ್ರಶಸ್ತಿ ನೀಡಿ ಪ್ರೋತ್ಸಾಹಿಸುತ್ತಿರುವ ಅಮ್ಮ ಫೌಂಡೇಶನ್ ಕಾರ್ಯ ಸ್ವಾಗತಾರ್ಹವಾಗಿದೆ ಎಂದರು.

ದೇವರಹಿಪ್ಪರಗಿ ಪರದೇಶಿ ಮಠದ ಶಿವಯೋಗೇಶ್ವರ ಶಿವಾಚಾರ್ಯರು ಸಾನಿಧ್ಯ ವಹಿಸಿ, ಆಶೀರ್ವಚನ ನೀಡಿದರು.

ಸಿರಿಗನ್ನಡ ಸಂಭ್ರಮದ ನಿಮಿತ್ಯ ನಾಡಿನ ಸಾಧಕರಿಗೆ ಪ್ರಶಸ್ತಿ ನೀಡಿ ಗೌರವಿಸಲಾಯಿತು. ಬಂಜಾರಾ ನೃತ್ಯ, ಗೊಂದಳಿ ಪದ, ಭರತ ನಾಟ್ಯ, ವಿವಿಧ ಕಲಾ ತಂಡಗಳಿಂದ ಸಮಾರಂಭ ಕಳೆಗಟ್ಟಿತ್ತು.

ಶಿಕ್ಷಕರ ಸಂಘದ ಜಿಲ್ಲಾ ಸಂಘಟನಾ ಕಾರ್ಯದರ್ಶಿ ಕಬೂಲ್ ಕೊಕಟನೂರ ಸ್ವಾಗತಿಸಿ, ಪ್ರಾಸ್ತಾವಿಕವಾಗಿ ಮಾತನಾಡಿದರು. ಎಸ್‌ಬಿ ವಿಸ್ಡಮ್ ಕರಿಯರ್ ಅಕಾಡೆಮಿ ಮುಖ್ಯಸ್ಥ ಶರಣಯ್ಯ ಭಂಡಾರಿಮಠ ಆಶಯ ನುಡಿಗಳನ್ನಾಡಿದರು.

ಕಾಂಗ್ರೆಸ್ ಮುಖಂಡರಾದ ಅಬ್ದುಲ್‌ಹಮೀದ ಮುಶ್ರೀಫ, ಯುವ ಭಾರತ ಸಮಿತಿ ಅಧ್ಯಕ್ಷ ಉಮೇಶ ಕಾರಜೋಳ, ಕೆಪಿಸಿಸಿ ರಾಜ್ಯ ಪ್ರಧಾನ ಕಾರ್ಯದರ್ಶಿ ಮಹಮ್ಮದರಫೀಕ ಟಪಾಲ, ಜಿಪಂ ಮಾಜಿ ಅಧ್ಯಕ್ಷೆ ಅಪ್ಸರಾಬೇಗಂ ಚಪ್ಪರಬಂದ, ಜಿಲ್ಲಾ ಸಹಕಾರಿ ಯುನಿಯನ್ ಅಧ್ಯಕ್ಷ ಎಂ ಸಿ ಮುಲ್ಲಾ, ರಾಜಶೇಖರ ಕುಚಬಾಳ, ದೀಪಾ ರೆಡ್ಡಿ, ಅರ್ಜುನ ಲಮಾಣಿ, ಸುರೇಶ ಶೆಡಶಾಳ, ಹಣಮಂತ ಕೊಣದಿ, ಎ ಎಂ ತಾಂಬೋಳಿ, ಅಶೋಕ ಚನಬಸಗೋಳ, ಮಲಕಪ್ಪ ಟಕ್ಕಳಕಿ, ಅಶೋಕ ಬೂದಿಹಾಳ ಯು ಐ ಶೇಖ, ಶಿವರಾಜ ಬಿರಾದಾರ, ಮಹಾಂತಗೌಡ ಪಾಟೀಲ, ಶ್ರೀಶೈಲ ಮುಳಜಿ, ಹುಸೇನ್ ಕೊಕಟನೂರ, ಮಹಿಬೂಬ ಕೊಕಟನೂರ ಸೇರಿದಂತೆ ಮತ್ತೀತರರು ಇದ್ದರು.

ರಸ್ತೆ ಅಪಘಾತಗಳ ನಿಯಂತ್ರಣಕ್ಕೆ ಎ.ಐ (AI) ತಂತ್ರಜ್ಞಾನದ ಬಲ

■ ಉದಯರಶ್ಮಿ ದಿನಪತ್ರಿಕೆ

ಬೆಂಗಳೂರು: ರಾಜ್ಯದಲ್ಲಿ ರಸ್ತೆ ಅಪಘಾತಗಳು ಮತ್ತು ಅವುಗಳಿಂದ ಸಂಭವಿಸುವ ಸಾವು–ನೋವುಗಳನ್ನು ಗಣನೀಯವಾಗಿ ತಗ್ಗಿಸಲು ಕೃತಕ ಬುದ್ಧಿಮತ್ತೆ (ಎಐ) ಆಧಾರಿತ ಸ್ಮಾರ್ಟ್ ಎನ್‌ಫೋರ್ಸ್‌ಮೆಂಟ್ ವ್ಯವಸ್ಥೆ, ಅಪಘಾತ ವಲಯಗಳ ವೈಜ್ಞಾನಿಕ ಸುಧಾರಣೆ ಹಾಗೂ ತ್ವರಿತ ತುರ್ತು ಚಿಕಿತ್ಸಾ ಸೌಲಭ್ಯಗಳನ್ನು ಮತ್ತಷ್ಟು ಬಲಪಡಿಸಲಾಗುತ್ತಿದೆ ಎಂದು ಸರ್ಕಾರದ ಮುಖ್ಯ ಕಾರ್ಯದರ್ಶಿ ಡಾ. ಶಾಲಿನಿ ರಜನೀಶ್ ಅವರು ತಿಳಿಸಿದ್ದಾರೆ.

ತಮ್ಮ ಅಧ್ಯಕ್ಷತೆಯಲ್ಲಿ ನಡೆದ 24ನೇ ಕರ್ನಾಟಕ ರಾಜ್ಯ ರಸ್ತೆ ಸುರಕ್ಷತಾ ಪ್ರಾಧಿಕಾರದ ಸಭೆಯ ಬಳಿಕ ಮಾಹಿತಿ ನೀಡಿದ ಅವರು, ರಸ್ತೆ ಸುರಕ್ಷತೆಯು ಕೇವಲ ಒಂದು ಇಲಾಖೆಯ ಕೆಲಸವಲ್ಲ; ಪೊಲೀಸ್, ಸಾರಿಗೆ, ಆರೋಗ್ಯ, ಲೋಕೋಪಯೋಗಿ, ನಗರಾಭಿವೃದ್ಧಿ ಮತ್ತು ಸ್ಥಳೀಯ ಸಂಸ್ಥೆಗಳು ಪರಸ್ಪರ ಸಮನ್ವಯದಿಂದ ಕಾರ್ಯನಿರ್ವಹಿಸಬೇಕಾದ ಮಹತ್ವದ ಸಾರ್ವಜನಿಕ ಜವಾಬ್ದಾರಿಯಾಗಿದೆ ಎಂದು ತಿಳಿಸಿದರು.

ಅಪಘಾತ ಪ್ರಮಾಣದಲ್ಲಿ ಇಳಿಕೆ: ರಾಜ್ಯದಲ್ಲಿ ನೋಂದಾಯಿತ ವಾಹನಗಳ ಸಂಖ್ಯೆ ನಿರಂತರವಾಗಿ ಹೆಚ್ಚಾಗುತ್ತಿದ್ದರೂ, 2018ರಿಂದ 2025ರ ಅವಧಿಯಲ್ಲಿ ಪ್ರತಿ 10,000 ವಾಹನಗಳಿಗೆ ಸಂಭವಿಸುವ ಅಪಘಾತಗಳ ಪ್ರಮಾಣ ಶೇ. 27ರಷ್ಟು (17.28 ರಿಂದ 12.56ಕ್ಕೆ) ಹಾಗೂ ಮರಣ ದರ ಶೇ. 21ರಷ್ಟು (4.55 ರಿಂದ 3.59ಕ್ಕೆ) ಇಳಿಕೆಯಾಗಿದೆ. ಪ್ರಸಕ್ತ 2026ರ ಜನವರಿಯಿಂದ ಅಕ್ಟೋಬರ್‌ವರೆಗೆ 37,443 ಅಪಘಾತಗಳು ಸಂಭವಿಸಿದ್ದು, ಕಳೆದ ವರ್ಷದ ಇದೇ ಅವಧಿಗೆ ಹೋಲಿಸಿದರೆ ಮೃತಪಟ್ಟವರ ಸಂಖ್ಯೆಯಲ್ಲಿ 220ರಷ್ಟು ಇಳಿಕೆ ಕಂಡುಬಂದಿದೆ.

ಎ.ಐ ಕ್ಯಾಮೆರಾ ಹಾಗೂ ಕಪ್ಪು ಸ್ಥಳಗಳ ಸುಧಾರಣೆ: ಸಂಚಾರ ನಿಯಮ ಉಲ್ಲಂಘನೆ ಮತ್ತು ಅಪಘಾತ ಮಾಡಿ ಪರಾರಿಯಾಗುವ (ಹಿಟ್ ಅಂಡ್ ರನ್) ವಾಹನಗಳನ್ನು ಪತ್ತೆಹಚ್ಚಲು ಗುರುತಿಸಲಾದ 87 ಸ್ಥಳಗಳ ಪೈಕಿ 27 ಕಡೆ ಎ.ಐ ಆಧಾರಿತ ಸ್ಮಾರ್ಟ್ ಕ್ಯಾಮೆರಾಗಳನ್ನು ಅಳವಡಿಸಲಾಗಿದ್ದು, 20 ಕಡೆ ಇ–ಚಲನ್ ವ್ಯವಸ್ಥೆಯಡಿ ಕಾರ್ಯನಿರ್ವಹಿಸುತ್ತಿವೆ. ಇದರಿಂದ ಈಗಾಗಲೇ 6,500 ಚಲನ್‌ಗಳನ್ನು ದಾಖಲಿಸಲಾಗಿದ್ದು, ಉಳಿದ 60 ಸ್ಥಳಗಳಲ್ಲಿ ಕಾಮಗಾರಿ ಪ್ರಗತಿಯಲ್ಲಿದೆ. ಅಲ್ಲದೆ, ರಾಜ್ಯ ಮತ್ತು ಕೇಂದ್ರ ಸರ್ಕಾರ ಗುರುತಿಸಿರುವ ಅಪಘಾತ ಸಂಭವಿಸುವ ಬ್ಲಾಕ್ ಸ್ಪಾಟ್ ಗಳಲ್ಲಿ ಅಲ್ಪಾವಧಿ ಮತ್ತು ದೀರ್ಘಾವಧಿ ಸುಧಾರಣಾ ಕಾಮಗಾರಿಗಳನ್ನು ಚುರುಕುಗೊಳಿಸಲಾಗಿದೆ.

ರೂ. 322 ಕೋಟಿ ಕ್ರಿಯಾ ಯೋಜನೆ: 2026–27ನೇ ಸಾಲಿನ ರಸ್ತೆ ಸುರಕ್ಷತಾ ಕ್ರಮಗಳಿಗಾಗಿ ಒಟ್ಟು ರೂ. 322 ಕೋಟಿ ಮೊತ್ತದ ಕ್ರಿಯಾ ಯೋಜನೆ ಸಿದ್ಧಪಡಿಸಲಾಗಿದ್ದು, ಇದರಲ್ಲಿ ರೂ. 233.11 ಕೋಟಿಯನ್ನು ಮುಂದುವರಿದ ಕಾಮಗಾರಿಗಳಿಗೆ ಹಾಗೂ ರೂ. 88.89 ಕೋಟಿಯನ್ನು ಹೊಸ ಕಾಮಗಾರಿಗಳಿಗೆ ಮೀಸಲಿಡಲಾಗಿದೆ. ಸಾರ್ವಜನಿಕರಲ್ಲಿ ಅರಿವು ಮೂಡಿಸಲು ಮಾಧ್ಯಮಗಳು, ಚಿತ್ರಮಂದಿರಗಳು ಮತ್ತು ಬಸ್ ನಿಲ್ದಾಣಗಳಲ್ಲಿ ವ್ಯಾಪಕ ಪ್ರಚಾರ ಕೈಗೊಳ್ಳಲಾಗುವುದು ಎಂದು ಹಿರಿಯ ಅಧಿಕಾರಿಗಳು ಉಪಸ್ಥಿತರಿದ್ದರು. ಡಾ. ಶಾಲಿನಿ ರಜನೀಶ್ ತಿಳಿಸಿದರು.



ತುರ್ತು ಚಿಕಿತ್ಸೆಗೆ ರೂ. 2.50 ಲಕ್ಷದವರೆಗೆ ನಗದುರಹಿತ ನೆರವು

ಪಿಎಂ–ರಹತ್ & ಸಿಎಂ–ಆರ್ಕ್: 2026ರ ಏಪ್ರಿಲ್ 15ರಿಂದ ಜಾರಿಯಾಗಿರುವ 'ಪಿಎಂ–ರಹತ್' ಯೋಜನೆಯಡಿ ಅಪಘಾತದ ಸಂತ್ರಸ್ತರಿಗೆ 7 ದಿನಗಳವರೆಗೆ ಗರಿಷ್ಠ ರೂ.1.50 ಲಕ್ಷದವರೆಗೆ ನಗದುರಹಿತ ಚಿಕಿತ್ಸೆ ನೀಡಲಾಗುತ್ತಿದೆ. ಇದಕ್ಕೆ ಪೂರಕವಾಗಿ 'ಮುಖ್ಯಮಂತ್ರಿ ಆರೋಗ್ಯ ಕರ್ನಾಟಕ' ಯೋಜನೆಯಡಿ ಹೆಚ್ಚುವರಿ ರೂ. 1.00 ಲಕ್ಷ ಸೇರಿದಂತೆ ಒಟ್ಟು ರೂ. 2.50 ಲಕ್ಷದವರೆಗೆ ಚಿಕಿತ್ಸಾ ನೆರವು ಲಭ್ಯವಿದೆ. ರಾಜ್ಯದ 3,445 ಸರ್ಕಾರಿ ಮತ್ತು ಖಾಸಗಿ ಆಸ್ಪತ್ರೆಗಳು ಈ ಯೋಜನೆಯಡಿ ನೋಂದಣಿಯಾಗಿವೆ.

ಚಾಲನಾ ಪರವಾನಗಿ ಪರೀಕ್ಷೆಗೂ ಮುನ್ನ ಜಾಗೃತಿ ವಿಡಿಯೋ ಕಡ್ಡಾಯ

ಚಾಲನಾ ತರಬೇತಿ ಸಂಸ್ಥೆಗಳ ಮೇಲೆ ಸಾರಿಗೆ ಇಲಾಖೆ ನಿರಂತರ ನಿಗಾ ಇಡಬೇಕು ಹಾಗೂ ಚಾಲನಾ ಪರವಾನಗಿ ಪರೀಕ್ಷೆಗೆ ಹಾಜರಾಗುವ ಪ್ರತಿಯೊಬ್ಬ ಅಭ್ಯರ್ಥಿಗೂ ಹೆಲ್ಮೆಟ್, ಸೀಟ್ ಬೆಲ್ಟ್, ವೇಗ ನಿಯಂತ್ರಣ, ಮದ್ಯಪಾನ ಮತ್ತು ಮೊಬೈಲ್ ಬಳಕೆ ನಿಷೇಧದ ಕುರಿತ ಜಾಗೃತಿ ವಿಡಿಯೋಗಳನ್ನು ಕಡ್ಡಾಯವಾಗಿ ಪ್ರದರ್ಶಿಸಬೇಕು. ವಿಡಿಯೋ ವೀಕ್ಷಿಸಿ ನಿಯಮಗಳನ್ನು ಅರಿತಿರುವ ಬಗ್ಗೆ ಅಭ್ಯರ್ಥಿಗಳಿಂದ ಸಹಿ ಪಡೆಯುವ ವ್ಯವಸ್ಥೆ ಜಾರಿಗೆ ತರುವಂತೆ ಸಾರಿಗೆ ಇಲಾಖೆಗೆ ನಿರ್ದೇಶನ ನೀಡಲಾಗಿದೆ.

100 ಹೊಸ ಆಂಬುಲೆನ್ಸ್

ತುರ್ತು ಸ್ಪಂದನೆಗಾಗಿ 108 ಮತ್ತು 102 ಸೇವೆಗಳನ್ನು 112 ಸಹಾಯವಾಣಿಯೊಂದಿಗೆ ಸಂಯೋಜಿಸಲಾಗಿದೆ. ಜೊತೆಗೆ 100 ಹೊಸ ಬಿಎಲ್‌ಎಸ್ ಆಂಬುಲೆನ್ಸಗಳ ಖರೀದಿ ಪೂರ್ಣಗೊಂಡಿದ್ದು, ಶೀಘ್ರದಲ್ಲೇ ಸೇವೆಗೆ ಲಭ್ಯವಾಗಲಿವೆ. ಜಿಲ್ಲಾ ಆಸ್ಪತ್ರೆಗಳ ತೀವ್ರ ನಿಗಾ ಘಟಕಗಳನ್ನು ಮೇಲ್ದರ್ಜೆಗೇರಿ ಸಲಾಗುತ್ತಿದೆ.

ಸಭೆಯಲ್ಲಿ ನಗರಾಭಿವೃದ್ಧಿ ಇಲಾಖೆ ಕಾರ್ಯದರ್ಶಿಗಳು, ಲೋಕೋಪಯೋಗಿ ಇಲಾಖೆ ಅಧಿಕಾರಿಗಳು ಹಾಗೂ ಸಂಚಾರ ವಿಭಾಗದ ಪೊಲೀಸ್ ಆಯುಕ್ತರು ಸೇರಿದಂತೆ ಹಿರಿಯ ಅಧಿಕಾರಿಗಳು ಉಪಸ್ಥಿತರಿದ್ದರು.

ರವಿ ಹಂಜ್ & ಪ್ರಕಾಶಕರ ವಿರುದ್ಧ ಕಾನೂನು ಕ್ರಮಕ್ಕೆ ಆಗ್ರಹಿಸಿ ಮನವಿ


■ ಉದಯರಶ್ಮಿ ದಿನಪತ್ರಿಕೆ

ದೇವರಹಿಪ್ಪರಗಿ: ಬಸವಣ್ಣನನ್ನು ಅವಹೇಳನ ಮಾಡಿದ ರವಿ ಹಂಜ್ ಹಾಗೂ ಅವನ ಸಹಚರನ ವಿರುದ್ಧ ಕಾನೂನು ಕ್ರಮ ಕೈಗೊಂಡು, ಬಸವಮಂಟಪ ಕೃತಿ ಮುಟ್ಟುಗೋಲು ಹಾಕಿಕೊಳ್ಳುವಂತೆ ಆಗ್ರಹಿಸಿ ತಾಲ್ಲೂಕು ಶರಣ ಸಾಹಿತ್ಯ ಪರಿಷತ್ತು, ವಚನ ಸಾಹಿತ್ಯ ಪರಿಷತ್ತು, ಬಸವ ಶರಣ ಸಂಗಮ ಸೇವಾ ಸಮೀತಿ ಘಟಕಗಳ ಪದಾಧಿಕಾರಿಗಳು ಗ್ರೇಡ್–2 ತಹಶೀಲ್ದಾರ ಎಂ.ಜಿ.ಬಿರಾದಾರ ಅವರಿಗೆ ಮನವಿ ಸಲ್ಲಿಸಿದರು.

ಪಟ್ಟಣದ ತಹಶೀಲ್ದಾರ ಕಚೇರಿಗೆ ಸೋಮವಾರ ಆಗಮಿಸಿದ ಶರಣ ಸಾಹಿತ್ಯ ಪರಿಷತ್ತು, ವಚನ ಸಾಹಿತ್ಯ ಪರಿಷತ್ತು, ಬಸವ ಶರಣ ಸಂಗಮ ಸೇವಾ ಸಮೀತಿ ಘಟಕಗಳ ಪದಾಧಿಕಾರಿಗಳು ಬಸವಣ್ಣನ ಕುರಿತು ಇಲ್ಲಸಲ್ಲದ ವಿಚಾರಗಳನ್ನು ಒಳಗೊಂಡ ಕೃತಿ ರಚಿಸಿ ಸಾಮಾಜಿಕ ಜಾಲತಾಣಗಳ ಮೂಲಕ ಅವಮಾನಿಸಿದ ರವಿ ಹಂಜ್(ಹಂಜಗಿಮಠ) ಹಾಗೂ ಕೃತಿ ರಚನೆಗೆ ಸಹಕಾರ ನೀಡಿದ ಮಾಧ್ಯಮದ ಸಹಚರನನ್ನು ಬಂಧಿಸಬೇಕು ಎಂದು ಆಗ್ರಹಿಸಿದರು.

ಈ ಸಂದರ್ಭದಲ್ಲಿ ಬಸವ ಶರಣ ಸಂಗಮ ಸೇವಾ ಸಮೀತಿ ತಾಲ್ಲೂಕು ಘಟಕದ ಅಧ್ಯಕ್ಷ ಸಂಗಪ್ಪ ತಡವಲ್ ಮಾತನಾಡಿ, ಕರ್ನಾಟಕದ ಸಾಂಸ್ಕೃತಿಕ ನಾಯಕ ಬಸವಣ್ಣನವರ ಕುರಿತು ಅವಮಾನಕಾರಿ ಕೃತಿ ರಚಿಸಿ ಬಸವ ಅನುಯಾಯಿಗಳಿಗೆ ತೀವ್ರ ನೋವನ್ನುಂಟು ಮಾಡಿದ ರವಿ ಹಂಜ್ ಹಾಗೂ ಅವನ ಸಹಚರನ ಕಾರ್ಯ ಅತ್ಯಂತ ಹೀನ ಹಾಗೂ ಸಮಾಜದ ಸ್ವಾಸ್ಥವನ್ನು ಹಾಳು ಮಾಡುವಂತಿದೆ. ಆದ್ದರಿಂದ ಅವರನ್ನು ಬಂಧಿಸಿ ಕಾನೂನು ಕ್ರಮ ಕೈಗೊಳ್ಳಬೇಕು ಹಾಗೂ ಕೃತಿಯನ್ನು ನಿಷೇಧಿಸಬೇಕು ಎಂದು ಆಗ್ರಹಿಸಿದರು.

ನಿವೃತ್ತ ನೌಕರರ ಸಂಘದ ತಾಲ್ಲೂಕು ಘಟಕದ ಅಧ್ಯಕ್ಷ ಸಿ.ಕೆ.ಕುದರಿ, ವಚನ ಸಾಹಿತ್ಯ ಪರಿಷತ್ತಿನ ತಾಲ್ಲೂಕು ಘಟಕದ ಅಧ್ಯಕ್ಷ ಜೆ.ಆರ್.ಬಿರಾದಾರ, ಸಂಗನಗೌಡ ಪಾಟೀಲ, ಶರಣ ಸಾಹಿತ್ಯ ಪರಿಷತ್ತಿನ ಪಿ.ಎಸ್.ಮಿಂಚನಾಳ, ವಿ.ಕೆ.ಪಾಟೀಲ, ಕೆ. ಎಮ್.ನಂದಿ. ಎ.ಎಚ್.ವಾಲಿಕಾರ, ಕೆ.ಜಿ.ಪಾಟೀಲ, ಬಸವರಾಜ ಮೆಟಗಾರ, ಜಿ.ಪಿ.ಬಿರಾದಾರ, ಜಿ. ಎಸ್.ಬಿರಾದಾರ, ವೈ.ಜಿ.ತಾವರಖೇಡ ಇದ್ದರು.





ರಸ್ತೆ ಕಾಮಗಾರಿ ಆರಂಭಿಸಲು ಆಗ್ರಹಿಸಿ ಸಾರ್ವಜನಿಕರ ಮನವಿ

■ ಉದಯರಶ್ಮಿ ದಿನಪತ್ರಿಕೆ

ವಿಜಯಪುರ: ನಗರದ ವಾರ್ಡ್ ನಂ. 27ರ ಮುಬೀನ್ ಚೌಕ್‌ನಿಂದ ನವಬಾಗ್ ರಸ್ತೆಯವರೆಗೆ ನಡೆಯುತ್ತಿರುವ ರಸ್ತೆ ನಿರ್ಮಾಣ ಕಾಮಗಾರಿಯಲ್ಲಿ ಹೊರ ಚರಂಡಿ ವ್ಯವಸ್ಥೆ ಮಾಡದೆ ಹಾಗೂ ಸುಮಾರು 10 ರಿಂದ 12 ಅಡಿಗಳಷ್ಟು ಸರ್ಕಾರಿ ಜಾಗ ಒತ್ತುವರಿಯಾಗಿದ್ದರೂ ಅದನ್ನು ತೆರವುಗೊಳಿಸದೆ ಕಾಮಗಾರಿ ಕೈಗೆತ್ತಿಕೊಂಡಿರುವುದಕ್ಕೆ ಸ್ಥಳೀಯ ನಾಗರಿಕರು ಆಕ್ಷೇಪ ವ್ಯಕ್ತಪಡಿಸಿ ಮಹಾನಗರ ಪಾಲಿಕೆ ಆಯುಕ್ತ ವಿಜಯ ಮೆಕ್ಕಳಗಿ ಅವರಿಗೆ ಸೋಮವಾರ ಮನವಿ ಸಲ್ಲಿಸಿದರು.

ಈ ಸಂದರ್ಭದಲ್ಲಿ ಇಜಾಜ್ ಅಹಮದ್ ಮುಕ್ಬಿಲ್ ಸೇರಿದಂತೆ ಹಲವರು ಮಾತನಾಡಿ, ರಸ್ತೆಯಿದ್ದಕ್ಕೂ ಕೆಲವರು ಸರ್ಕಾರಿ ಜಾಗವನ್ನು ಅತಿಕ್ರಮಿಸಿಕೊಂಡಿದ್ದಾರೆ ಎನ್ನಲಾಗಿದ್ದು, ಇದರಿಂದ ರಸ್ತೆಯ ಅಗಲ ಕಡಿಮೆಯಾಗಿದೆ. ಪರಿಣಾಮವಾಗಿ ಪ್ರತಿದಿನ ವಾಹನ ಸಂಚಾರಕ್ಕೆ ತೀವ್ರ ತೊಂದರೆಯಾಗುತ್ತಿದ್ದು, ಈ ಮಾರ್ಗದಲ್ಲಿ ಸಂಚಾರ ದಟ್ಟಣೆ ಉಂಟಾಗುತ್ತಿದೆ. ಶಾಲಾ ಮಕ್ಕಳು, ವೃದ್ಧರು, ರೋಗಿಗಳು ಸೇರಿದಂತೆ ಸಾರ್ವಜನಿಕರು ನಿತ್ಯ ಸಂಕಷ್ಟ ಅನುಭವಿಸುವಂತಾಗಿದೆ. ಈ ಕುರಿತು ವಾರ್ಡ್ನ ನಾಗರಿಕರು ಈಗಾಗಲೇ ವಿಜಯಪುರ ಜಿಲ್ಲಾಧಿಕಾರಿಗಳು ಹಾಗೂ ಮಹಾನಗರ ಪಾಲಿಕೆ ಆಯುಕ್ತರಿಗೆ ಲಿಖಿತ ಮನವಿ ಸಲ್ಲಿಸಿ, ಸರ್ಕಾರಿ ಜಾಗದ ಒತ್ತುವರಿ ತೆರವುಗೊಳಿಸುವಂತೆ ಒತ್ತಾಯಿಸಿದರೂ ಯಾವುದೇ ಕ್ರಮ ಕೈಗೊಂಡಿಲ್ಲ ಎಂದು ಅಸಮಾಧಾನ ವ್ಯಕ್ತಪಡಿಸಿದರು.

ಸರ್ಕಾರಿ ಜಾಗದ ಸಮೀಕ್ಷೆ ನಡೆಸಿ ಒತ್ತುವರಿಯನ್ನು ತೆರವುಗೊಳಿಸಬೇಕು. ನಂತರ ರಸ್ತೆ ಅಗಲಕ್ಕೆ ಅನುಗುಣವಾಗಿ ಅಗತ್ಯ ಹೊರಚರಂಡಿ ವ್ಯವಸ್ಥೆ ಕಲ್ಪಿಸಿ ಗುಣಮಟ್ಟದ ಕಾಮಗಾರಿ ಕೈಗೊಳ್ಳಬೇಕು. ಈ ವಿಷಯದಲ್ಲಿ ನಿರ್ಲಕ್ಷ್ಯ ತೋರಿರುವ ಸಂಬಂಧಪಟ್ಟ ಮಹಾನಗರ ಪಾಲಿಕೆ ಅಧಿಕಾರಿಗಳು ಹಾಗೂ ಸರ್ವೆ ಅಧಿಕಾರಿಗಳ ವಿರುದ್ಧ ಸೂಕ್ತ ತನಿಖೆ ನಡೆಸಿ ಕ್ರಮ ಕೈಗೊಳ್ಳಬೇಕು ಎಂದು ಸಾರ್ವಜನಿಕರು ಆಗ್ರಹಿಸಿದ್ದಾರೆ.

ಈ ಸಂದರ್ಭದಲ್ಲಿ ಮಹ್ಮದ ಗೌಸ್ ಖಾದ್ರಿ, ಸಾಧಿಕ ರೋಜಿಂದಾರ, ಅರಬಾದ ಶೇಖ, ಸಲೀಂ ಕೋಲಾರ, ಶಾಹಿದ ಮುಲ್ಲಾ ಸೇರಿದಂತೆ ಮುಂತಾದವರು ಉಪಸ್ಥಿತರಿದ್ದರು.

**ಬಿಡಾಡಿ ಹಂದಿಗಳ ಸಂಖ್ಯೆಯಲ್ಲಿ ಹೆಚ್ಚಳ । ಜನರ ದೈನಂದಿನ ಜೀವನಕ್ಕೆ

ಇತಿಹಾಸವನ್ನು ನಮ್ಮ ಅಭಿಮಾನಕ್ಕೆ ತಕ್ಕಂತೆ ಬದಲಾಯಿಸಲು ಸಾಧ್ಯವಿಲ್ಲ


ಇತಿಹಾಸದ ವಿಮರ್ಶೆಗೆ ಸ್ವಾತಂತ್ರ್ಯವಿರಲಿ, ಸಂಶೋಧನೆಗೆ ಪ್ರಾಮಾಣಿಕತೆಯಿರಲಿ, ಮಹನೀಯರ ಬಗ್ಗೆ ಮಾತನಾಡುವಾಗ ಸಾಮಾಜಿಕ ಜವಾಬ್ದಾರಿಯೂ ಇರಲಿ. ಬಸವಣ್ಣನವರನ್ನು ಅರ್ಥಮಾಡಿಕೊಳ್ಳೋಣ; ಇತಿಹಾಸವನ್ನು ದ್ವೇಷದ ಕನ್ನಡಕದಿಂದ ನೋಡದಿರೋಣ!

■ ಉದಯರಶ್ಮಿ ದಿನಪತ್ರಿಕೆ

ಇತ್ತೀಚೆಗೆ ಲೇಖಕ ರವಿ ಹಂಜ್ ಅವರ 'ಬಸವ ಮಂಟಪ' ಕೃತಿಯಲ್ಲಿನ ಕೆಲವು ವಿಚಾರಗಳು ಕರ್ನಾಟಕದಾದ್ಯಂತ ತೀವ್ರ ಚರ್ಚೆ ಮತ್ತು ವಿವಾದಕ್ಕೆ ಕಾರಣವಾಗಿವೆ. ಬಸವಣ್ಣನವರ ವ್ಯಕ್ತಿತ್ವ, ಬದುಕು ಮತ್ತು ಚಿಂತನೆಗಳ ಕುರಿತು ಕೃತಿಯಲ್ಲಿ ವ್ಯಕ್ತವಾಗಿರುವ ಕೆಲವು ನಿರೂಪಣೆಗಳಿಗೆ ಆಕ್ಷೇಪಗಳು ವ್ಯಕ್ತವಾಗಿವೆ. ಒಂದು ಕಡೆ ಬಸವಣ್ಣನವರ ಗೌರವಕ್ಕೆ ಧಕ್ಕೆಯಾಗಿದೆ ಎಂಬ ಅಭಿಪ್ರಾಯವಿದ್ದರೆ, ಮತ್ತೊಂದು ಕಡೆ ಐತಿಹಾಸಿಕ ದಾಖಲೆಗಳನ್ನು ಆಧರಿಸಿ ಭಿನ್ನವಾದ ವಿಚಾರಗಳನ್ನು ಮಂಡಿಸುವ ಸ್ವಾತಂತ್ರ್ಯ ಇರಬೇಕು ಎಂಬ ವಾದವೂ ಕೇಳಿಬರುತ್ತಿದೆ. ಈ ಬೆಳವಣಿಗೆ ಕೇವಲ ಒಂದು ಕೃತಿ ಅಥವಾ ಒಬ್ಬ ಲೇಖಕನಿಗೆ ಸಂಬಂಧಿಸಿದ ವಿವಾದವಾಗಿ ಉಳಿಯದೆ, ಇತಿಹಾಸವನ್ನು ನಾವು ಹೇಗೆ ಅಧ್ಯಯನ ಮಾಡಬೇಕು, ಮಹನೀಯರನ್ನು ಹೇಗೆ ಅರ್ಥಮಾಡಿಕೊಳ್ಳಬೇಕು ಮತ್ತು ಭಿನ್ನಾಭಿಪ್ರಾಯಗಳನ್ನು ಹೇಗೆ ಸ್ವೀಕರಿಸಬೇಕು ಎಂಬ ವಿಶಾಲವಾದ ಪ್ರಶ್ನೆಗಳನ್ನು ನಮ್ಮ ಮುಂದಿಟ್ಟಿದೆ.

ಈ ಸಂದರ್ಭದಲ್ಲಿ ನನ್ನ ಮನಸ್ಸಿನಲ್ಲಿ ಮೂಡುವ ಮೊದಲ ಪ್ರಶ್ನೆ ಇಷ್ಟೇ, ಇತಿಹಾಸವನ್ನು ಅಧ್ಯಯನ ಮಾಡುವುದೆಂದರೆ ನಮ್ಮ ಪೂರ್ವಗ್ರಹಗಳಿಗೆ ಪೂರಕವಾದ ಸಂಗತಿಗಳನ್ನು ಹುಡುಕುವುದೇ? ಅಥವಾ ಸತ್ಯವನ್ನು ತಿಳಿದುಕೊಳ್ಳುವ ಪ್ರಾಮಾಣಿಕ ಪ್ರಯತ್ನವೇ? ನಮಗೆ ಇಷ್ಟವಾದ ವ್ಯಕ್ತಿಗಳ ಬಗ್ಗೆ ಹೊಗಳಿಕೆಯ ಮಾತುಗಳನ್ನಷ್ಟೇ ಕೇಳಲು ಬಯಸುವುದು, ಇಷ್ಟವಿಲ್ಲದ ವ್ಯಕ್ತಿಗಳ ಬಗ್ಗೆ ಟೀಕೆಗಳನ್ನಷ್ಟೇ ಹುಡುಕುವುದು ವೈಚಾರಿಕತೆಯ ಲಕ್ಷಣವಲ್ಲ. ಇತಿಹಾಸವನ್ನು ಓದುವಾಗ ನಮ್ಮ ಅಭಿಮಾನ, ಅಸಮಾಧಾನ ಮತ್ತು ಸೈದ್ಧಾಂತಿಕ ನಿಲುವುಗಳನ್ನು ಸ್ವಲ್ಪ ಬದಿಗಿಟ್ಟು, ದಾಖಲೆಗಳು ಏನು ಹೇಳುತ್ತವೆ ಎಂಬುದನ್ನು ತಿಳಿದುಕೊಳ್ಳುವ ಮನೋಭಾವ ಬೆಳೆಸಿಕೊಳ್ಳಬೇಕು.

ಬಸವಣ್ಣನವರು ಕೇವಲ ಒಂದು ಧರ್ಮದ ಆರಾಧ್ಯ ವ್ಯಕ್ತಿಯಲ್ಲ;



ಅವರು ಕನ್ನಡ ನಾಡಿನ ಸಾಮಾಜಿಕ ಮತ್ತು ವೈಚಾರಿಕ ಇತಿಹಾಸದಲ್ಲಿ ಮಹತ್ವದ ಸ್ಥಾನ ಪಡೆದ ಸಮಾಜ ಸುಧಾರಕರು.

ಹನ್ನೆರಡನೆಯ ಶತಮಾನದಲ್ಲಿ ಸಮಾಜದಲ್ಲಿ ಜಾತಿ ಅಸಮಾನತೆ, ಕಂದಾಚಾರ, ಕರ್ಮಕಾಂಡ ಮತ್ತು ಮೇಲುಕೀಳಿನ ಭಾವನೆಗಳು ಬಲವಾಗಿ ನೆಲೆಗೊಂಡಿದ್ದ ಸಂದರ್ಭದಲ್ಲಿ ಬಸವಣ್ಣನವರು ಸಮಾನತೆ, ಕಾಯಕದ ಗೌರವ, ದಾಸೋಹ ಮತ್ತು ಮಾನವೀಯತೆಯ ಸಂದೇಶವನ್ನು ಸಾರಿದರು. ಮನುಷ್ಯನ ಶ್ರೇಷ್ಠತೆಯನ್ನು ಅವನ ಜನ್ಮದ ಆಧಾರದ ಮೇಲೆ ನಿರ್ಧರಿಸಬಾರದು; ಅವನ ನಡೆ, ನುಡಿ ಮತ್ತು ಕಾಯಕದ ಆಧಾರದ ಮೇಲೆ ಗುರುತಿಸಬೇಕು ಎಂಬ ಆಶಯವನ್ನು ತಮ್ಮ ವಚನಗಳ ಮೂಲಕ ಜನರಿಗೆ ತಲುಪಿಸಿದರು. ಅನುಭವ ಮಂಟಪದ ಪರಿಕಲ್ಪನೆಯ ಮೂಲಕ ವಿವಿಧ ಅನುಭವಗಳು ಮತ್ತು ವಿಚಾರಗಳ ವಿನಿಮಯಕ್ಕೆ ಮಹತ್ವ ನೀಡಿದ ಪರಂಪರೆಯೊಂದಿಗೆ ಅವರ ಹೆಸರು ಬೆಸೆದುಕೊಂಡಿದೆ. ಅಕ್ಕಮಹಾದೇವಿ, ಅಲ್ಲಮಪ್ರಭು, ಚೆನ್ನಬಸವಣ್ಣ ಸೇರಿದಂತೆ ಅನೇಕ ಶರಣರ ವಚನ ಪರಂಪರೆಯೂ ಈ ಕಾಲಘಟ್ಟದ ಸಾಮಾಜಿಕ ಮತ್ತು ಆಧ್ಯಾತ್ಮಿಕ ಚಳವಳಿಯ ಮಹತ್ವವನ್ನು ತಿಳಿಸುತ್ತದೆ. ಬಸವಣ್ಣನವರ ಮಹತ್ವವನ್ನು ಕೇವಲ ಧಾರ್ಮಿಕ ದೃಷ್ಟಿಯಿಂದ ಮಾತ್ರ ನೋಡುವುದು ಅವರ ಚಿಂತನೆಯ ವ್ಯಾಪ್ತಿಯನ್ನು ಸೀಮಿತಗೊಳಿಸಿದಂತಾಗುತ್ತದೆ. ಅವರ ವಿಚಾರಗಳಲ್ಲಿ ಸಾಮಾಜಿಕ ನ್ಯಾಯ, ವ್ಯಕ್ತಿಯ ಘನತೆ, ಶ್ರಮದ ಗೌರವ, ಸಮಾನ ಅವಕಾಶ ಮತ್ತು ಐತಿಹಾಸಿಕ ಮತ್ತು ಸಾಹಿತ್ಯಿಕ ಆಕರಗಳು ಏನು ಹೇಳುತ್ತವೆ? ಈ ಎಲ್ಲ ಸಂಗತಿಗಳನ್ನು ಮುಕ್ತವಾಗಿ ಪರಿಶೀಲಿಸಬೇಕು. ಕೃತಿಯಲ್ಲಿರುವ ವಾದಗಳನ್ನು ಅವುಗಳ ಆಧಾರದ ಮೇಲೆ ವಿಮರ್ಶಿಸಬೇಕು. ಲೇಖಕರ ಉದ್ದೇಶದ ಬಗ್ಗೆ ಊಹಾಪೋಹ ಮಾಡುವುದಕ್ಕಿಂತ ಅವರ ನಿರ್ದಿಷ್ಟ ವಾದಗಳನ್ನು ಪರಿಶೀಲಿಸುವುದು ಹೆಚ್ಚು ಉಪಯುಕ್ತ.

ಲೇಖಕರಿಗೂ ತಮ್ಮ ವಿಚಾರಗಳನ್ನು ಮಂಡಿಸುವ ಸ್ವಾತಂತ್ರ್ಯವಿದೆ. ಆದರೆ ಬರವಣಿಗೆ ಎಂದರೆ ಕೇವಲ ವೈಯಕ್ತಿಕ ಅಭಿಪ್ರಾಯ ವ್ಯಕ್ತಪಡಿಸುವ ಕ್ರಿಯೆಯಲ್ಲ; ವಿಶೇಷವಾಗಿ ಇತಿಹಾಸದಂತಹ ಸೂಕ್ಷ್ಮ



ನೈತಿಕ ಬದುಕಿನ ಸಂದೇಶಗಳಿವೆ. ಆದ್ದರಿಂದ ಅವರನ್ನು ಅಧ್ಯಯನ ಮಾಡುವಾಗ ಅವರ ವಚನಗಳನ್ನು ಮಾತ್ರವಲ್ಲದೆ, ಅವರು ಬದುಕಿದ ಕಾಲದ ಸಾಮಾಜಿಕ ವ್ಯವಸ್ಥೆ, ರಾಜಕೀಯ ಪರಿಸ್ಥಿತಿ ಮತ್ತು ಧಾರ್ಮಿಕ ಚಿಂತನೆಗಳನ್ನೂ ಗಮನಿಸಬೇಕು.

ಇತಿಹಾಸದ ಪ್ರತಿಯೊಬ್ಬ ವ್ಯಕ್ತಿಯೂ ಅಧ್ಯಯನ ಮತ್ತು ವಿಮರ್ಶೆಗೆ ಒಳಪಡಬಹುದು. ಅವರ ವಿಚಾರಗಳು, ನಿರ್ಧಾರಗಳು, ಬದುಕಿನ ಘಟನೆಗಳು ಮತ್ತು ಸಾಮಾಜಿಕ ಕೊಡುಗೆಗಳನ್ನು ಸಂಶೋಧಕರು ಪರಿಶೀಲಿಸಬಹುದು. ಹೊಸ ದಾಖಲೆಗಳು ದೊರೆತರೆ ಅವುಗಳ ಆಧಾರದ ಮೇಲೆ ಹಿಂದಿನ ನಿರೂಪಣೆಗಳನ್ನು ಮರುಪರಿಶೀಲಿಸಬಹುದು. ಇದೇ ಇತಿಹಾಸದ ಅಧ್ಯಯನದ ಸಹಜ ಪ್ರಕ್ರಿಯೆ.

ಆದರೆ ಇಲ್ಲಿ ಒಂದು ಪ್ರಮುಖ ವ್ಯತ್ಯಾಸವನ್ನು ಅರ್ಥಮಾಡಿಕೊಳ್ಳಬೇಕು. ಐತಿಹಾಸಿಕ ವ್ಯಕ್ತಿಯ ಬಗ್ಗೆ ಪ್ರಶ್ನೆ ಕೇಳುವುದಕ್ಕೂ, ಅವರ ವ್ಯಕ್ತಿತ್ವದ ಬಗ್ಗೆ ಆಧಾರರಹಿತ ನಿರ್ಣಯಗಳನ್ನು ಪ್ರಕಟಿಸುವುದಕ್ಕೂ ಬಹಳ ವ್ಯತ್ಯಾಸವಿದೆ. ಒಂದು ವಿಚಾರವನ್ನು ಮಂಡಿಸುವಾಗ ಅದಕ್ಕೆ ಸಂಬಂಧಿಸಿದ ಮೂಲ ದಾಖಲೆ ಯಾವುದು? ಅದು ಯಾವ ಕಾಲಕ್ಕೆ ಸೇರಿದ್ದು? ಅದನ್ನು ಬರೆದವರು ಯಾರು? ಆ ದಾಖಲೆಯ ಉದ್ದೇಶವೇನು? ಅದರ ವಿಶ್ವಾಸಾರ್ಹತೆಯನ್ನು ಇತರ ಆಕರಗಳೊಂದಿಗೆ ಹೋಲಿಸಿದಾಗ ಏನು ತಿಳಿದುಬರುತ್ತದೆ? ಎಂಬ ಪ್ರಶ್ನೆಗಳಿಗೆ ಉತ್ತರ ಇರಬೇಕು. ಒಂದು ದಾಖಲೆಯಲ್ಲಿ ಉಲ್ಲೇಖವಿದೆ ಎಂಬ ಕಾರಣಕ್ಕೆ ಅದರಲ್ಲಿರುವ ಪ್ರತಿಯೊಂದು ಸಂಗತಿಯೂ ಅಂತಿಮ ಸತ್ಯವಾಗುವುದಿಲ್ಲ. ಹಾಗೆಯೇ ನಮಗೆ ಇಷ್ಟವಿಲ್ಲ ಎಂಬ ಕಾರಣಕ್ಕೆ ಒಂದು ದಾಖಲೆಯನ್ನು ಸಂಪೂರ್ಣವಾಗಿ ತಿರಸ್ಕರಿಸಲೂ ಸಾಧ್ಯವಿಲ್ಲ.

ಸಂಶೋಧನೆಯ ನಿಜವಾದ ಶಕ್ತಿ ತನ್ನ ಅಭಿಪ್ರಾಯವನ್ನು ಸಮರ್ಥಿಸಿಕೊಳ್ಳುವುದರಲ್ಲಿ ಇಲ್ಲ; ತನ್ನ ಅಭಿಪ್ರಾಯ ತಪ್ಪಾಗಿದ್ದರೆ ಅದನ್ನು ತಿದ್ದಿಕೊಳ್ಳುವ ಪ್ರಾಮಾಣಿಕತೆಯಲ್ಲಿದೆ.

ರವಿ ಹಂಜ್ ಅವರ 'ಬಸವ ಮಂಟಪ' ಕೃತಿಯ ಕುರಿತು ನಡೆಯುತ್ತಿರುವ ಚರ್ಚೆಯಲ್ಲಿಯೂ ಇದೇ ವಿಧಾನ ಅನುಸರಿಸಬೇಕಾಗಿದೆ. ಕೃತಿಯಲ್ಲಿರುವ ಯಾವ ನಿರ್ದಿಷ್ಟ ಅಂಶಗಳು ಆಕ್ಷೇಪಕ್ಕೆ ಕಾರಣವಾಗಿವೆ? ಅವುಗಳಿಗೆ ಲೇಖಕರು ಯಾವ ಐತಿಹಾಸಿಕ ದಾಖಲೆಗಳನ್ನು ಆಧಾರವಾಗಿಟ್ಟುಕೊಂಡಿದ್ದಾರೆ? ಆ ದಾಖಲೆಗಳ ವಿಶ್ವಾಸಾರ್ಹತೆ ಏನು? ಬಸವಣ್ಣನವರ ಕುರಿತು ಲಭ್ಯವಿರುವ ಇತರ



ವಿಷಯಗಳಲ್ಲಿ ಅದು ಸಾರ್ವಜನಿಕ ಜವಾಬ್ದಾರಿಯೂ ಹೌದು. ಓದುಗರ ಮುಂದೆ ಇಡುವ ಮಾಹಿತಿಯ ನಿಖರತೆ, ಬಳಸುವ ಭಾಷೆ, ಉಲ್ಲೇಖಿಸುವ ದಾಖಲೆಗಳು ಮತ್ತು ಅವುಗಳಿಂದ ತಲುಪುವ ನಿರ್ಣಯಗಳ ಬಗ್ಗೆ ಲೇಖಕರು ಎಚ್ಚರಿಕೆ ವಹಿಸಬೇಕು. ಅಭಿವ್ಯಕ್ತಿ ಸ್ವಾತಂತ್ರ್ಯವಿದೆ ಎಂಬ ಕಾರಣಕ್ಕೆ ಆಧಾರರಹಿತ ಆರೋಪಗಳನ್ನು ಸತ್ಯವೆಂದು ಪ್ರತಿಪಾದಿಸಲು ಸಾಧ್ಯವಿಲ್ಲ. ವಿಮರ್ಶೆ ಇರಲಿ, ಆದರೆ ಅದು ತರ್ಕಬದ್ಧವಾಗಿರಲಿ; ಭಿನ್ನಾಭಿಪ್ರಾಯ ಇರಲಿ, ಆದರೆ ಅದು ಸಂಶೋಧನೆಯ ಪ್ರಾಮಾಣಿಕತೆಯನ್ನು ಕಳೆದುಕೊಳ್ಳದಿರಲಿ.

ಇಲ್ಲಿ ಇನ್ನೊಂದು ಮುಖ್ಯವಾದ ಸಂಗತಿ ಇದೆ. ಬಸವಣ್ಣನವರನ್ನು ಗೌರವಿಸುವುದೆಂದರೆ ಅವರ ಹೆಸರಿನಲ್ಲಿ ನಡೆಯುವ ಪ್ರತಿಯೊಂದು ಆಚರಣೆಯನ್ನೂ ಸಮರ್ಥಿಸುವುದಲ್ಲ. ಅವರ ವಿಚಾರಗಳನ್ನು ನಮ್ಮ ಬದುಕಿನಲ್ಲಿ ಅಳವಡಿಸಿಕೊಳ್ಳುವುದು. ಜಾತಿ ವ್ಯವಸ್ಥೆಯನ್ನು ಪ್ರಶ್ನಿಸಿದ ಬಸವಣ್ಣನವರನ್ನು ಗೌರವಿಸುವ ನಾವು ಇಂದಿಗೂ ಜಾತಿಯ ಹೆಸರಿನಲ್ಲಿ ಮನುಷ್ಯರನ್ನು ವಿಭಜಿಸುತ್ತಿದ್ದರೆ ನಮ್ಮ ಗೌರವದಲ್ಲಿ ಅರ್ಥವೇನು? ಕಾಯಕದ ಮಹತ್ವವನ್ನು ಸಾರುತ್ತಾ ಶ್ರಮಜೀವಿಗಳಿಗೆ ಗೌರವ ನೀಡದಿದ್ದರೆ ಏನು ಪ್ರಯೋಜನ? ದಾಸೋಹದ ತತ್ವವನ್ನು ಹೊಗಳುತ್ತಾ ಹಸಿದವರಿಗೆ ಅನ್ನ ನೀಡದಿದ್ದರೆ ಆ ಚಿಂತನೆಯಿಂದ ನಾವು ಕಲಿತದ್ದಾದರೂ ಏನು?

ಬಸವಣ್ಣನವರ ವಚನಗಳನ್ನು ವೇದಿಕೆಗಳಲ್ಲಿ ಉಲ್ಲೇಖಿಸುವುದಕ್ಕಿಂತ ಅವುಗಳ ಆಶಯವನ್ನು ನಮ್ಮ ನಡವಳಿಕೆಯಲ್ಲಿ ತೋರಿಸುವುದು ಮುಖ್ಯ. ಅವರ ಹೆಸರಿನಲ್ಲಿ ಸಂಘರ್ಷಗಳನ್ನು ಬೆಳೆಸುವುದಕ್ಕಿಂತ ಅವರು ಕನಸು ಕಂಡ ಸಮಾನತೆಯ ಸಮಾಜ ನಿರ್ಮಾಣಕ್ಕೆ ಪ್ರಯತ್ನಿಸುವುದು ಮುಖ್ಯ. ಬಸವಣ್ಣನವರನ್ನು ಒಂದು ನಿರ್ದಿಷ್ಟ ಜಾತಿ ಅಥವಾ ಸಮುದಾಯದ ಸ್ವತ್ತಾಗಿ ನೋಡುವುದಕ್ಕಿಂತ, ಅವರ ಮಾನವೀಯ ಮತ್ತು ಸಾಮಾಜಿಕ ಚಿಂತನೆಗಳನ್ನು ಇಡೀ ಸಮಾಜದ ಪರಂಪರೆಯಾಗಿ ಅರ್ಥಮಾಡಿಕೊಳ್ಳಬೇಕು.

ಇಂದಿನ ಸಮಾಜದಲ್ಲಿ ವ್ಯಕ್ತಿಪೂಜೆ ಮತ್ತು ವ್ಯಕ್ತಿದ್ವೇಷ ಎರಡೂ ಅಪಾಯಕಾರಿ ರೀತಿಯಲ್ಲಿ ಬೆಳೆಯುತ್ತಿವೆ. ನಮ್ಮ ಸಿದ್ಧಾಂತಕ್ಕೆ ಹೊಂದಿಕೊಂಡವರ ತಪ್ಪುಗಳನ್ನೂ ಸಮರ್ಥಿಸುವುದು, ನಮ್ಮ ಸಿದ್ಧಾಂತಕ್ಕೆ ವಿರುದ್ಧವಾದವರ ಸಾಧನೆಗಳನ್ನೂ ನಿರಾಕರಿಸುವುದು ಸಾಮಾನ್ಯವಾಗುತ್ತಿದೆ. ಮಹಾತ್ಮ ಗಾಂಧೀಜಿ, ಡಾ. ಬಿ.ಆರ್. ಅಂಬೇಡ್ಕರ್, ಜವಾಹರಲಾಲ್ ನೆಹರೂ, ಬಸವಣ್ಣನವರು ಅಥವಾ ಇಂದಿನ ರಾಜಕೀಯ ನಾಯಕರು ಯಾರೇ ಆಗಿರಲಿ, ಅವರ ಬದುಕು ಮತ್ತು ಕೊಡುಗೆಗಳನ್ನು ಸಮತೋಲನದಿಂದ ಅಧ್ಯಯನ ಮಾಡಬೇಕು. ಯಾರನ್ನೂ ಪ್ರಶ್ನಾತೀತರನ್ನಾಗಿ ಮಾಡಬಾರದು; ಅದೇ ರೀತಿ ಯಾರೊಬ್ಬರ ಸಾಧನೆಯನ್ನೂ ಪೂರ್ವಗ್ರಹದಿಂದ ಅಲ್ಲಗಳೆಯಬಾರದು.

ನನ್ನ ನಿಲುವು ಬಹಳ ಸರಳವಾಗಿದೆ. ಬಸವಣ್ಣನವರ ಕುರಿತು ಸಂಶೋಧನೆ ನಡೆಯಲಿ, ಹೊಸ ಐತಿಹಾಸಿಕ ಸಂಗತಿಗಳು ಬೆಳಕಿಗೆ ಬರಲಿ, ಅವರ ಚಿಂತನೆಗಳ ಕುರಿತು ಭಿನ್ನಾಭಿಪ್ರಾಯಗಳೂ ವ್ಯಕ್ತವಾಗಲಿ. ಆದರೆ ಪ್ರತಿಯೊಂದು ನಿರೂಪಣೆಯೂ ಸಾಕ್ಷ್ಯಾಧಾರ ಮತ್ತು ಸಂಶೋಧನಾ ಪ್ರಾಮಾಣಿಕತೆಯನ್ನು ಹೊಂದಿರಲಿ.

ಕೊನೆಯದಾಗಿ ಒಂದು ಮಾತು

ಬಸವಣ್ಣನವರನ್ನು ಗೌರವಿಸುವುದೆಂದರೆ ಅವರ ಹೆಸರಿನಲ್ಲಿ ನಡೆಯುವ ವಿವಾದಗಳಲ್ಲಿ ಭಾಗವಹಿಸುವುದಷ್ಟೇ ಅಲ್ಲ; ಅವರು ಪ್ರತಿಪಾದಿಸಿದ ಸಮಾನತೆ, ಕಾಯಕ, ದಾಸೋಹ ಮತ್ತು ಮಾನವೀಯತೆಯನ್ನು ನಮ್ಮ ಬದುಕಿನಲ್ಲಿ ಅಳವಡಿಸಿಕೊಳ್ಳುವುದು. ಅವರನ್ನು ಅಧ್ಯಯನ ಮಾಡುವುದೆಂದರೆ ಅವರ ಕಾಲವನ್ನು ಅರ್ಥಮಾಡಿಕೊಳ್ಳುವುದು; ವಿಮರ್ಶಿಸುವುದೆಂದರೆ ದಾಖಲೆ ಮತ್ತು ತರ್ಕದ ಆಧಾರದ ಮೇಲೆ ವಿಚಾರ ಮಂಡಿಸುವುದು. ಈ ಎರಡರ ನಡುವೆ ಸಂಘರ್ಷ ಇರಬೇಕೆಂದಿಲ್ಲ.

ಇತಿಹಾಸವನ್ನು ನಮ್ಮ ಅಭಿಮಾನಕ್ಕೆ ತಕ್ಕಂತೆ ಬದಲಾಯಿಸಲು ಸಾಧ್ಯವಿಲ್ಲ. ಹಾಗೆಯೇ ಇತಿಹಾಸದ ಹೆಸರಿನಲ್ಲಿ ದ್ವೇಷವನ್ನು ಬೆಳೆಸುವುದರಿಂದ ಸತ್ಯವನ್ನು ಕಂಡುಕೊಳ್ಳಲೂ ಸಾಧ್ಯವಿಲ್ಲ. ಮುಂದಿನ ಪೀಳಿಗೆಗೆ ನಾವು ಹಸ್ತಾಂತರಿಸಬೇಕಾಗಿರುವುದು ವ್ಯಕ್ತಿಗಳ ನಡುವಿನ ದ್ವೇಷವಲ್ಲ; ವಿಚಾರಗಳ ನಡುವಿನ ಆರೋಗ್ಯಕರ ಸಂವಾದ. ಪೂರ್ವಗ್ರಹವಲ್ಲ; ಪ್ರಶ್ನಿಸುವ ಸಾಮರ್ಥ್ಯ. ಅಂಧಾನುಕರಣೆಯಲ್ಲ; ಸ್ವತಂತ್ರ ಚಿಂತನೆ.

ಬಸವಣ್ಣನವರ ನಿಜವಾದ ಗೌರವ ಅವರ ಪ್ರತಿಮೆಗಳ ಎತ್ತರದಲ್ಲಿಲ್ಲ; ಅವರ ಚಿಂತನೆಗಳು ನಮ್ಮ ಸಮಾಜದ ನಡವಳಿಕೆಯಲ್ಲಿ ಎಷ್ಟು ಎತ್ತರಕ್ಕೆ ಬೆಳೆದಿವೆ ಎಂಬುದರಲ್ಲಿ ಅಡಗಿದೆ.

ಇತಿಹಾಸವನ್ನು ಅಧ್ಯಯನ ಮಾಡೋಣ; ವ್ಯಕ್ತಿಗಳನ್ನು ದ್ವೇಷಿಸುವುದನ್ನು ಅಲ್ಲ. ವಿಚಾರಗಳನ್ನು ಚರ್ಚಿಸೋಣ; ದ್ವೇಷವನ್ನು ಹರಡುವುದನ್ನು ಅಲ್ಲ. ಏಕೆಂದರೆ ಸಮಾಜವನ್ನು ಬದಲಾಯಿಸುವ ಶಕ್ತಿ ಅರಿವಿನಲ್ಲಿದೆಯೇ ಹೊರತು ಅಸಹಿಷ್ಣುತೆಯಲ್ಲಿಲ್ಲ.

ಅಭಿಮತ
■ - ಪ್ರಶಾಂತ ಕುಲಕರ್ಣಿ.
ಉಪನ್ಯಾಸಕರು
ಸಿಂದಗಿ – ವಿಜಯಪುರ ಜಿಲ್ಲೆ



ನವೆಂಬರ್ 30 ಅರ್ಜಿ ಸಲ್ಲಿಸಲು ಕೊನೆಯ ದಿನ; ಮುದ್ರಣ ಮತ್ತು ವಿದ್ಯುನ್ಮಾನ ಮಾಧ್ಯಮದ 25 ವಿಭಾಗಗಳಲ್ಲಿ ಪ್ರಶಸ್ತಿ

ಕೆಯುಡಬ್ಲ್ಯೂಜೆ ವಾರ್ಷಿಕ ಪ್ರಶಸ್ತಿಗಳಿಗೆ ಅರ್ಜಿ ಆಹ್ವಾನ

■ ಉದಯರಶ್ಮಿ ದಿನಪತ್ರಿಕೆ

ಬೆಂಗಳೂರು: ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘದ (ಕೆಯುಡಬ್ಲ್ಯೂಜೆ) 2025ನೇ ಸಾಲಿನ ವಾರ್ಷಿಕ ಪ್ರಶಸ್ತಿಗಳಿಗಾಗಿ ಪತ್ರಕರ್ತರಿಂದ ಅರ್ಜಿ ಆಹ್ವಾನಿಸಲಾಗಿದೆ.

ಮುದ್ರಣ ಮತ್ತು ವಿದ್ಯುನ್ಮಾನ ಮಾಧ್ಯಮದ ವಿವಿಧ ವಿಭಾಗಗಳಲ್ಲಿ ನೀಡಲಾಗುವ ಪ್ರಶಸ್ತಿಗಳಿಗೆ 2025ರ ಜನವರಿ 1ರಿಂದ ಡಿಸೆಂಬರ್ 31ರ ಅವಧಿಯಲ್ಲಿ ಪ್ರಕಟವಾದ ವರದಿ, ಲೇಖನ, ವಿಶೇಷ ವರದಿ ಹಾಗೂ ಸುದ್ದಿ ಛಾಯಾಚಿತ್ರಗಳನ್ನು ಸಲ್ಲಿಸಬಹುದು.

ಆಸಕ್ತ ಪತ್ರಕರ್ತರು ತಮ್ಮ ಸ್ವವಿವರಗಳೊಂದಿಗೆ ಅಗತ್ಯ ದಾಖಲೆಗಳನ್ನು ಲಗತ್ತಿಸಿ, ನವೆಂಬರ್ 30, 2026ರೊಳಗೆ ಅಧ್ಯಕ್ಷರು/ಪ್ರಧಾನ ಕಾರ್ಯದರ್ಶಿ, ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘ, 3ನೇ ಮಹಡಿ, ಕಂದಾಯ ಭವನ, ಕೆ.ಜಿ. ರಸ್ತೆ, ಬೆಂಗಳೂರು–09 ಈ ವಿಳಾಸಕ್ಕೆ ತಲುಪುವಂತೆ ಅರ್ಜಿ ಸಲ್ಲಿಸಬೇಕು ಎಂದು ಸಂಘದ ರಾಜ್ಯಾಧ್ಯಕ್ಷ ಶಿವಾನಂದ ತಗಡೂರು ತಿಳಿಸಿದ್ದಾರೆ.

ಮುದ್ರಣ ಮಾಧ್ಯಮ ವಿಭಾಗದ ಪ್ರಶಸ್ತಿಗಳು

* ಜಿ. ನಾರಾಯಣಸ್ವಾಮಿ ಪ್ರಶಸ್ತಿ ಅತ್ಯುತ್ತಮ ಗ್ರಾಮಾಂತರ ವರದಿ
* ಪಟೇಲ್ ಭೈರಹನುಮಯ್ಯ ಪ್ರಶಸ್ತಿ ಅತ್ಯುತ್ತಮ ಮಾನವೀಯ ವರದಿ
* ಗಿರಿಧರ್ ಪ್ರಶಸ್ತಿ ಅತ್ಯುತ್ತಮ ಅಪರಾಧ ವರದಿ
* ಬಿ.ಎಸ್. ವೆಂಕಟರಾಂ ಪ್ರಶಸ್ತಿ ಅತ್ಯುತ್ತಮ ಸ್ಕೂಪ್ ವರದಿ
* ಕೆ.ಎ. ನೆಟ್ಟಕಲಪ್ಪ ಪ್ರಶಸ್ತಿ ಅತ್ಯುತ್ತಮ ಕ್ರೀಡಾ ವರದಿ
* ಖಾದ್ರಿ ಶಾಮಣ್ಣ ಪ್ರಶಸ್ತಿ ಅತ್ಯುತ್ತಮ ರಾಜಕೀಯ ವಿಮರ್ಶೆ
* ಮಂಗಳ ಎಂ.ಸಿ. ವರ್ಗಿಸ್ ಪ್ರಶಸ್ತಿ ವಾರಪತ್ರಿಕೆಯಲ್ಲಿ ಚಿತ್ರ ಲೇಖನ
* ತಗಡೂರು ಕಮಲಮ್ಮ ವೀರೇಗೌಡ ಪ್ರಶಸ್ತಿ ರೈತಾಪಿ ಜನರ ಸಮಸ್ಯೆಗಳ ವರದಿ
* ಆರ್.ಎಲ್. ವಾಸುದೇವರಾವ್ ಪ್ರಶಸ್ತಿ ಅರಣ್ಯ ಕುರಿತ ಅತ್ಯುತ್ತಮ ವರದಿ
* ಆರ್.ಎಲ್. ವಾಸುದೇವರಾವ್ ಪ್ರಶಸ್ತಿ ವನ್ಯಪ್ರಾಣಿಗಳ ಕುರಿತ ಅತ್ಯುತ್ತಮ ವರದಿ
* ಬಿ.ಜಿ. ತಿಮ್ಮಪ್ಪಯ್ಯ ಪ್ರಶಸ್ತಿ ಆರ್ಥಿಕ ದುರ್ಬಲ ವರ್ಗದವರ ಕುರಿತ ವರದಿ
* ಮಂಡಿಬೆಲೆ ಶಾಮಣ್ಣ ಸ್ಮಾರಕ ಪ್ರಶಸ್ತಿ ಗ್ರಾಮೀಣ ಜನಜೀವನದ ಅತ್ಯುತ್ತಮ ವರದಿ
* ನಾಡಪ್ರಭು ಕೆಂಪೇಗೌಡ ಸ್ಮಾರಕ ಪ್ರಶಸ್ತಿ ಬೆಂಗಳೂರು ಮತ್ತು ಗ್ರಾಮಾಂತರ ಜಿಲ್ಲೆಯ ಅಭಿವೃದ್ಧಿ ಕುರಿತ ವರದಿ
* ಯಜಮಾನ್ ಟಿ. ನಾರಾಯಣಪ್ಪ ಸ್ಮಾರಕ ಪ್ರಶಸ್ತಿ ಜಿಲ್ಲಾ ಪತ್ರಿಕೆಗಳಲ್ಲಿ ಪ್ರಕಟವಾದ ಕೃಷಿ ವರದಿ
* ನಾಡಿಗೆರ ಕೃಷ್ಣರಾಯರ ಪ್ರಶಸ್ತಿ ವಿಡಂಬನಾತ್ಮಕ ಲೇಖನ
* ಅತ್ಯುತ್ತಮ ಪುಟ ವಿನ್ಯಾಸಗಾರರು ಡೆಸ್ಕ್ ವಿಭಾಗ
* ನ್ಯಾಯಾಲಯದ (ಕೋರ್ಟ್ ಬೀಟ್) ಅತ್ಯುತ್ತಮ ವರದಿ
* ಸುಣ್ಣವಂಡ ಶ್ರೀನಿವಾಸ ಚಂಗಪ್ಪ ಪ್ರಶಸ್ತಿ ಅತ್ಯುತ್ತಮ ಸೇನಾ ವರದಿ
* ಕೆ.ಎನ್. ಸುಬ್ರಮಣ್

ಮಾನವ ಸಂಬಂಧಗಳ ಉಳಿವಿಗೆ ಗೌಪ್ಯತೆಯೇ ಅಡಿಪಾಯ!

■ ಉದಯರಶ್ಮಿ ದಿನಪತ್ರಿಕೆ



ಸಿದ್ಧಲಿಂಗ ಚೌಧರಿ.
ಮಾಜಿ ಅಧ್ಯಕ್ಷರು, ತಾಲೂಕು ಕಸಾಪ
ಸಿಂದಗಿ – ವಿಜಯಪುರ ಜಿಲ್ಲೆ

ಮನುಷ್ಯನ ವ್ಯಕ್ತಿತ್ವವನ್ನು ಅಳೆಯಲು ಅವನ ವಿದ್ಯೆ, ಸಂಪತ್ತು, ಅಧಿಕಾರ ಅಥವಾ ಅಂತಸ್ತುಗಳಿಗಿಂತ ಅವನು ಉಳಿಸಿಕೊಂಡಿರುವ ವಿಶ್ವಾಸವೇ ನಿಜವಾದ ಮಾನದಂಡ. ಒಬ್ಬ ವ್ಯಕ್ತಿಯನ್ನು ನಂಬಬಹುದೇ ಅಥವಾ ಇಲ್ಲವೇ ಎಂಬುದನ್ನು ತಿಳಿಯಬೇಕಾದರೆ, ಆತ ಇತರರ ರಹಸ್ಯಗಳನ್ನು ಹೇಗೆ ಕಾಪಾಡಿಕೊಳ್ಳುತ್ತಾನೆ ಎಂಬುದನ್ನು ಗಮನಿಸಿದರೆ ಸಾಕು. ಏಕೆಂದರೆ ರಹಸ್ಯವನ್ನು ಕಾಪಾಡುವುದು ಕೇವಲ ಪ್ರಾಮಾಣಿಕತೆಯ ಲಕ್ಷಣವಲ್ಲ; ಅದು ವ್ಯಕ್ತಿಯ ಸಂಸ್ಕಾರ, ವಿವೇಕ ಮತ್ತು ಜವಾಬ್ದಾರಿತನದ ಪ್ರತಿಬಿಂಬವಾಗಿದೆ.



ಪ್ರತಿಯೊಬ್ಬ ಮನುಷ್ಯನ ಬದುಕಿನಲ್ಲಿಯೂ ಎಲ್ಲರೊಂದಿಗೆ ಹಂಚಿಕೊಳ್ಳಬಹುದಾದ ಸಂಗತಿಗಳಿರುವಂತೆ, ಕೆಲವೇ ಕೆಲವು ಆತ್ಮೀಯರೊಂದಿಗೆ ಹಂಚಿಕೊಳ್ಳಬಹುದಾದ ನೋವು, ಸಂಕಟ, ಸಮಸ್ಯೆ ಮತ್ತು ವೈಯಕ್ತಿಕ ವಿಚಾರಗಳಿರುತ್ತವೆ. ಅಂತಹ ವಿಷಯಗಳನ್ನು ಮತ್ತೊಬ್ಬರೊಂದಿಗೆ ಹಂಚಿಕೊಳ್ಳುವಾಗ ವ್ಯಕ್ತಿಯು ಕೇವಲ ಮಾತುಗಳನ್ನು ಹೇಳುವುದಿಲ್ಲ; ತನ್ನ ಮನಸ್ಸಿನ ಬಾಗಿಲನ್ನೇ ತೆರೆಯುತ್ತಾನೆ. ಆ ಸಂದರ್ಭದಲ್ಲಿ ಅವನು ನಿರೀಕ್ಷಿಸುವುದು ಸಲಹೆಗಿಂತ ಹೆಚ್ಚಾಗಿ ವಿಶ್ವಾಸ ಮತ್ತು ಗೌಪ್ಯತೆಯನ್ನು.



ಸ್ನೇಹಿತನೊಬ್ಬ ತನ್ನ ಕೌಟುಂಬಿಕ ಸಮಸ್ಯೆಯನ್ನು ನಮ್ಮೊಂದಿಗೆ ಹಂಚಿಕೊಂಡಾಗ ಅದನ್ನು ಮತ್ತೊಬ್ಬರಿಗೆ ಹೇಳದೆ ಕಾಪಾಡುವುದು ನಿಜವಾದ ಸ್ನೇಹಧರ್ಮ. ಆದರೆ ಅದೇ ವಿಷಯವನ್ನು ನಾಲ್ಕು ಜನರ ಮುಂದೆ ಚರ್ಚಿಸಿ, ಮತ್ತೊಬ್ಬರ ನೋವನ್ನೇ ಮನರಂಜನೆಯ ವಸ್ತುವನ್ನಾಗಿಸುವುದು ಮಾನವೀಯತೆಗೆ ಮಾಡುವ ಅಪಮಾನ. ಗುಟ್ಟನ್ನು ಬಯಲು ಮಾಡುವುದರಿಂದ ಕ್ಷಣಿಕವಾಗಿ ಕುತೂಹಲ ತಣಿಯಬಹುದು. ಆದರೆ ಶಾಶ್ವತವಾಗಿ ಒಂದು ಸಂಬಂಧವೇ ಮುರಿದುಹೋಗಬಹುದು.


ಇಂದಿನ ಡಿಜಿಟಲ್ ಯುಗದಲ್ಲಿ ಗೌಪ್ಯತೆಯ ಪ್ರಶ್ನೆ ಮತ್ತಷ್ಟು ಗಂಭೀರವಾಗಿದೆ. ಮೊಬೈಲ್, ವಾಟ್ಸಪ್ ಮತ್ತು ಸಾಮಾಜಿಕ ಜಾಲತಾಣಗಳ ಮೂಲಕ ಖಾಸಗಿ ಸಂದೇಶಗಳು, ಛಾಯಾಚಿತ್ರಗಳು ಹಾಗೂ ವೈಯಕ್ತಿಕ ಮಾಹಿತಿಗಳು ಕ್ಷಣಾರ್ಧದಲ್ಲಿ ಹರಡುತ್ತಿವೆ. ಯಾರದೋ ಖಾಸಗಿ ಬದುಕನ್ನು ಅವರ ಅನುಮತಿಯಿಲ್ಲದೆ ಸಾರ್ವಜನಿಕಗೊಳಿಸುವುದು ಕೇವಲ ಅಸಭ್ಯ ನಡವಳಿಕೆಯಲ್ಲ; ಅದು ವ್ಯಕ್ತಿಯ ಘನತೆ, ಗೌರವ ಮತ್ತು ಮಾನಸಿಕ ನೆಮ್ಮದಿಗೆ ಧಕ್ಕೆ ತರುವ ಕೃತ್ಯವಾಗಿದೆ. ತಂತ್ರಜ್ಞಾನ ಬೆಳೆದಂತೆ ಮನುಷ್ಯನ ವಿವೇಕವೂ ಬೆಳೆಯಬೇಕಲ್ಲವೇ?

ಆದರೆ ರಹಸ್ಯವನ್ನು ಕಾಪಾಡುವುದೆಂದರೆ ಪ್ರತಿಯೊಂದು ವಿಷಯವನ್ನೂ ಮುಚ್ಚಿಡುವುದಲ್ಲ. ಅನ್ಯಾಯ, ಶೋಷಣೆ, ಹಿಂಸೆ, ಅಪರಾಧ ಅಥವಾ ಮತ್ತೊಬ್ಬರ ಜೀವಕ್ಕೆ ಅಪಾಯ ಉಂಟುಮಾಡುವ ಸಂಗತಿಗಳನ್ನು ಮರೆಮಾಚುವುದು ಜವಾಬ್ದಾರಿಯಲ್ಲ. ಅಂತಹ ಸಂದರ್ಭಗಳಲ್ಲಿ ಸಂಬಂಧಪಟ್ಟವರ ಗಮನಕ್ಕೆ ತರುವುದು ಸಾಮಾಜಿಕ ಕರ್ತವ್ಯ. ಹೀಗಾಗಿ ಗೌಪ್ಯತೆಯೊಂದಿಗೆ ಮಾನವೀಯತೆ ಮತ್ತು ವಿವೇಕವೂ ಇರಬೇಕು.

ವಿಶ್ವಾಸವೆಂಬುದು ಹಣ ಕೊಟ್ಟು



ಖರೀದಿಸುವ ವಸ್ತುವಲ್ಲ. ಅದು ವರ್ಷಗಳ ಒಡನಾಟ, ಪ್ರಾಮಾಣಿಕತೆ ಮತ್ತು ನಡವಳಿಕೆಯಿಂದ ಗಳಿಸುವ ಅಮೂಲ್ಯ ಸಂಪತ್ತು. ಅದನ್ನು ಗಳಿಸಲು ವರ್ಷಗಳೇ ಬೇಕಾಗಬಹುದು; ಕಳೆದುಕೊಳ್ಳಲು ಒಂದು ಕ್ಷಣ ಸಾಕು. ಒಮ್ಮೆ ಒಡೆದ ಕನ್ನಡಿಯನ್ನು ಜೋಡಿಸಬಹುದು. ಆದರೆ ಅದರಲ್ಲಿ ಮೂಡಿದ ಬಿರುಕುಗಳನ್ನು



ಸಂಪೂರ್ಣವಾಗಿ ಅಳಿಸುವುದು ಕಷ್ಟ. ವಿಶ್ವಾಸವೂ ಹಾಗೆಯೇ!

ಇನ್ನೊಬ್ಬರ ಗುಟ್ಟನ್ನು ಕಾಪಾಡುವವನು ಅವರ ಹೃದಯದಲ್ಲಿ ಗೌರವದ ಸ್ಥಾನ ಪಡೆಯುತ್ತಾನೆ. ಗುಟ್ಟನ್ನು ಬಯಲು ಮಾಡುವವನು ತನ್ನ ವ್ಯಕ್ತಿತ್ವದ ಮೌಲ್ಯವನ್ನೇ ಕಳೆದುಕೊಳ್ಳುತ್ತಾನೆ. ಆದ್ದರಿಂದ ಮಾತಿನಲ್ಲಿ ಮಧುರತೆ, ನಡವಳಿಕೆಯಲ್ಲಿ ಪ್ರಾಮಾಣಿಕತೆ, ಸಂಬಂಧಗಳಲ್ಲಿ ವಿಶ್ವಾಸ ಮತ್ತು ಮನಸ್ಸಿನಲ್ಲಿ ವಿವೇಕ ಇರಬೇಕು.

ನೆನಪಿರಲಿ, ಇನ್ನೊಬ್ಬರು ನಮ್ಮೊಂದಿಗೆ ಹಂಚಿಕೊಂಡ ರಹಸ್ಯವು ನಮ್ಮ ಸ್ವತ್ತಲ್ಲ; ಅದು ನಮ್ಮ ಜವಾಬ್ದಾರಿಗೆ ಒಪ್ಪಿಸಿದ ಅಮೂಲ್ಯ ನಂಬಿಕೆಯ ನಿಧಿ!

ಗೌಪ್ಯತೆಯನ್ನು ಕಾಪಾಡುವುದು ಕೇವಲ ಪ್ರಾಮಾಣಿಕತೆಯಲ್ಲ; ಅದು ಮಾನವೀಯ ಸಂಬಂಧಗಳ ಘನತೆಯನ್ನು ಉಳಿಸುವ ಜವಾಬ್ದಾರಿ. ಗುಟ್ಟು ಬಯಲಾದರೆ ವಿಶ್ವಾಸಕ್ಕೆ ಬಿರುಕು!

ಶನಿದೇವರ ಸನ್ನಿಧಿಯಲ್ಲಿ ನಾಗದೇವತೆಯ ಪ್ರತಿಷ್ಠಾಪನೆ

■ ಉದಯರಶ್ಮಿ ದಿನಪತ್ರಿಕೆ



ಮುದ್ದೇಬಿಹಾಳ: ಪವಿತ್ರ ಕಾರ್ತಿಕ ಮಾಸದ ತುಳಸಿ ಲಗ್ನದ ದಿನದಂದು ಶನಿದೇವರ ಸನ್ನಿಧಿಯಲ್ಲಿ ನಾಗದೇವತೆಯ ಪ್ರತಿಷ್ಠಾಪನೆ ನಡೆದಿರುವುದು ಈ ಭಾಗದ ಭಕ್ತರ ಸೌಭಾಗ್ಯ ಎಂದು ಜಿಲ್ಲಾ ಪಂಚಾಯತ ಮಾಜಿ ಉಪಾಧ್ಯಕ್ಷ ಪ್ರಭುಗೌಡ ದೇಸಾಯಿ ಹೇಳಿದರು.

ಪಟ್ಟಣದ ಹಡಲಗೇರಿ ರಸ್ತೆಯಲ್ಲಿರುವ ಶನೇಶ್ವರ ದೇವಸ್ಥಾನದ ಆವರಣದಲ್ಲಿ ನಾಗದೇವತೆಯ ಮೂರ್ತಿ ಪ್ರಾಣ ಪ್ರತಿಷ್ಠಾಪನಾ ಕಾರ್ಯಕ್ರಮದಲ್ಲಿ ಶ್ರದ್ಧಾ ಭಕ್ತಿಯಿಂದ ಭಾಗಿಯಾಗಿ ಅವರು ಮಾತನಾಡಿದರು.

ದೂರದ ಕುಕ್ಕೆ ಸುಬ್ರಹ್ಮಣ್ಯಕ್ಕೆ ತೆರಳಲು ಸಾಧ್ಯವಾಗದ ಭಕ್ತರಿಗೆ, ಆ ಕ್ಷೇತ್ರದಿಂದಲೇ ವಿಶೇಷ ಪೂಜೆಯೊಂದಿಗೆ ತರಲಾದ ಪವಿತ್ರ ಮೃತ್ತಿಕೆ, ಹವಳ ಹಾಗೂ ಮುತ್ತು ಸಮೇತ ಪ್ರತಿಷ್ಠಾಪನೆಗೊಂಡಿರುವ ಇಲ್ಲಿನ ನಾಗದೇವರ ದರ್ಶನ ಭಾಗ್ಯ ಸಿಗುತ್ತಿರುವುದು ಅತ್ಯಂತ ಸಂತಸದ ಸಂಗತಿ. ಇನ್ನು ಸರ್ಪದೋಶದಂತಹ ಪೂಜಾ ವಿಧಾನಗಳಿಗೆ ಕುಕ್ಕೆಗೆ ತೆರಳಲು ಸಾಧ್ಯವಾಗದ ಭಕ್ತರು, ಇಲ್ಲಿಯೇ ಪೂಜೆ ಸಲ್ಲಿಸಿ ಪರಿಹಾರ ಪಡೆದುಕೊಳ್ಳಬಹುದು ಎಂದರು.

ಪೂಜಾ ಕೈಂಕರ್ಯ ನೆರವೇರಿಸಿದ ವೇ.ಮೂ ಶಂಕರಭಟ್ಟರು ಮತ್ತು ಪ್ರಾಣೇಶ ತಳಘಟ್ಟಿ ಮಾತನಾಡಿ, ತಿಳಿದೋ ತಿಳಿಯದೆಯೋ ಹುತ್ತಕ್ಕೆ ಅಥವಾ ನಾಗದೇವತೆಗೆ ಯಾರಾದರೂ ಪೀಡಿಸಿದ್ದರೆ ಅದು ದೋಶವಾಗಿರುತ್ತದೆ. ಮತ್ತು ಕೆಲವರ ಜನ್ಮ ಜಾತಕದಲ್ಲಿ ದೋಶ ಇರುವಂಥ–ವವರು ಶಾಶ್ತದಲ್ಲಿ ಹೇಳಿದಂತೆ ನಾಗದೇವತೆಗೆ ಪೂಜೆ ಮಾಡಿಸಬೇಕಾಗುತ್ತದೆ. ಇಂತಹ ಸಂದರ್ಭದಲ್ಲಿ ಈ ಭಾಗದ ಜನತೆ ದೂರದ ಕುಕ್ಕೆಗೆ ಹೋಗಿ ಪೂಜಾ ವಿಧಾನಗಳನ್ನು ಮಾಡಬೇಕಾಗಿತ್ತು. ಇನ್ನು ಇಲ್ಲಿಯೇ ನಾಗದೇವತೆಯ ಪ್ರತಿಷ್ಠಾಪನೆ ಆಗಿರುವದರಿಂದ ಅಲ್ಲಿಗೆ ಹೋಗಿ ಪೂಜೆ ಸಲ್ಲಿಸಿದರೆ ಏನು ಫಲ ಸಿಗುತ್ತದೆಯೋ ಇಲ್ಲಿಯೂ ಅದೇ ಫಲ ಸಿಗಲಿದೆ. ಇದರಿಂದ ಈ ಭಾಗದ ಭಕ್ತರಿಗೆ ಸಾಕಷ್ಟು ಅನುಕೂಲವಾಗಲಿದೆ ಎಂದರು.

ದೇವಸ್ಥಾನದ ಅರ್ಚಕ ನಾಗಪ್ಪ ಮಕ್ತೇದಾರ, ಮುಖಂಡ ಸತೀಶ ಓಸ್ವಾಲ ಮಾತನಾಡಿ ಊರಿನ ಸುಭಿಕ್ಷೆ ಮತ್ತು ಲೋಕಕಲ್ಯಾಣಕ್ಕಾಗಿ ಭಕ್ತರೆಲ್ಲರೂ ಒಗ್ಗೂಡಿ ಯಾವುದೇ ಭೇದಭಾವವಿಲ್ಲದೆ ಈ ಮಹೋತ್ಸವವನ್ನು ಯಶಸ್ವಿಗೊಳಿಸಿರುವುದು ಮಾದರಿಯಾಗಿದೆ. ಮುಂಬರುವ ದಿನಗಳಲ್ಲಿ ಈ ದೇವಸ್ಥಾನವು ಈ ಭಾಗದ ಪ್ರಮುಖ ಆದ್ಯಾತ್ಮಿಕ ಕೇಂದ್ರವಾಗಿ ಮತ್ತಷ್ಟು ಅಭಿವೃದ್ಧಿ ಹೊಂದಲಿದೆ ಎಂದು ವಿಶ್ವಾಸ ವ್ಯಕ್ತಪಡಿಸಿದರು.

ನಾಗದೇವತೆಯ ಕಟ್ಟಿ ನಿರ್ಮಾಣ ಹಾಗೂ ಮೂರ್ತಿ ಪ್ರಾಣಪ್ರತಿಷ್ಠಾಪನಾ ಮಹೋತ್ಸವವು ಅತ್ಯಂತ ಭಕ್ತಿಭಾವ ಮತ್ತು ಸಡಗರದಿಂದ ಯಶಸ್ವಿಯಾಗಿ ನೆರವೇರಿತು. ಈ ಪ್ರತಿಷ್ಠಾಪನಾ ಕಾರ್ಯಕ್ಕಾಗಿ ಶ್ರೀ ಕ್ಷೇತ್ರ ಕುಕ್ಕೆ ಸುಬ್ರಹ್ಮಣ್ಯದಿಂದ ವಿಶೇಷ ಪೂಜಾ ಕೈಂಕರ್ಯಗಳೊಂದಿಗೆ ತರಲಾಗಿದ್ದ ಪವಿತ್ರ ಮೃತ್ತಿಕೆ, ಹವಳ ಹಾಗೂ ಮುತ್ತುಗಳನ್ನು ಇರಿಸಿ, ಆಗಮೋಕ್ತ ಹಾಗೂ ಶಾಸ್ತ್ರೋಕ್ತ ವಿಧಿವಿಧಾನಗಳೊಂದಿಗೆ ನಾಗದೇವತೆಯ ಪ್ರಾಣಪ್ರತಿಷ್ಠಾಪನೆ ನೆರವೇರಿಸಲಾಯಿತು.

ಬೆಳಿಗ್ಗೆಯಿಂದಲೇ ದೇವಸ್ಥಾನದಲ್ಲಿ ಗಣಪತಿ ಪೂಜೆ, ಕಳಸಾರಾಧನೆ, ನಾಗಪ್ರತಿಷ್ಠಾ ಹೋಮ ಹಾಗೂ ವಿಶೇಷ ಅಭಿಷೇಕಗಳು ಜರುಗಿದವು. ಮಧ್ಯಾಹ್ನ ಮಹಾಮಂಗಳಾರತಿ ನಂತರ ನೆರೆದಿದ್ದ ಭಕ್ತಾದಿಗಳಿಗೆ ತೀರ್ಥ ಪ್ರಸಾದ ಹಾಗೂ ಅನ್ನಸಂತರ್ಪಣೆ ವ್ಯವಸ್ಥೆ ಮಾಡಲಾಗಿತ್ತು. ಸಂಜೆ ಕಾರ್ತಿಕ ದೀಪೋತ್ಸವ ಹಾಗೂ ವಿಶೇಷ ತುಳಸಿ ಪೂಜೆ ಶ್ರದ್ಧಾಭಕ್ತಿಯಿಂದ ನಡೆಯಿತು. ನಾಗದೇವತೆ ಮೂರ್ತಿ ಸೇವೆ ನೀಡಿದ ಮುಗೆಪ್ಪ ಮೋಟಗಿ, ವೇ.ಮೂ ಚಿದಂಬರ ಜೋಶಿ, ದಾನಮ್ಮ ಶಿವಶಿಂಪಿ, ಸ್ಮಿತಾ ಶಿವಶಿಂಪಿ, ಮಧುರಾ ಮಕ್ತೇದಾರ, ಮಾದೇಶ ಮಕ್ತೇದಾರ, ಉಮಾ ಅಂಗಡಿ, ನಾಗೇಂದ್ರ ಶಿವಶಿಂಪಿ, ವಿಜಯ ಸೋನಾರ, ಸೇರಿದಂತೆ ಮತ್ತೀತರರು ಇದ್ದರು.

ವಿವಿಧ ಬೇಡಿಕೆಗಳ ಈಡೇರಿಕೆ ಆಗ್ರಹಿಸಿ ಜಿಪಿಟಿ ಶಿಕ್ಷಕರ ಸಂಘ ಮನವಿ

■ ಉದಯರಶ್ಮಿ ದಿನಪತ್ರಿಕೆ



ಇಂಡಿ: ತಾಲೂಕಿಗೆ ವರ್ಗಾವಣೆಗೊಂಡು ಆಗಮಿಸಿದ ನೂತನ ಕ್ಷೇತ್ರ ಶಿಕ್ಷಣಾಧಿಕಾರಿ ಸುರೇಂದ್ರ ಕಾಂಬಳೆ ಅವರನ್ನು ಇಂದು ಅವರ ಕಚೇರಿಯಲ್ಲಿ ಕರ್ನಾಟಕ ರಾಜ್ಯ (68) ಪದವೀಧರ ಪ್ರಾಥಮಿಕ ಶಿಕ್ಷಕರ ಸಂಘದ ಇಂಡಿ ತಾಲೂಕ ಘಟಕದ ವತಿಯಿಂದ ಪದಾಧಿಕಾರಿಗಳು ವಿವಿಧ ಬೇಡಿಕೆಗಳ ಈಡೇರಿಕೆಗಾಗಿ ಮನವಿ ಪತ್ರ ಸಲ್ಲಿಸಿದರು.

ಜಿಪಿಟಿ ಶಿಕ್ಷಕರಿಗಾಗಿ ಒಂದು ದಿನದ ಗುರುಸ್ಪಂದನ ಕಾರ್ಯಕ್ರಮ ಆಯೋಜಿಸಿ, ಶಿಕ್ಷಕರಿಗೆ ತಮ್ಮ ಸೇವಾ ಪುಸ್ತಕ ಪರಿಶೀಲಿಸಲು ಹಾಗೂ ಸೇವಾ ದಾಖಲೆಗಳಲ್ಲಿನ ಸಮಸ್ಯೆ ಸರಿಪಡಿಸಿಕೊಳ್ಳಲು ಅವಕಾಶ ಕಲ್ಪಿಸಿಕೊಡುವದು. ಮತ್ತು ಬೇಸಿಗೆ ರಜಾ ಅವಧಿಯಲ್ಲಿ ಜನಗಣತಿ ಕಾರ್ಯ ನಿರ್ವಹಿಸಿದ ಶಿಕ್ಷಕ–ರಿಗೆ ನಿಯಮಾನುಸಾರ ಗಳಿಕೆ ರಜೆ ಮಂಜೂರು ಮಾಡುವ ಪ್ರಕ್ರಿಯೆಯನ್ನು ಶೀಘ್ರವಾಗಿ ಕೈಗೊಳ್ಳಬೇಕು ಎಂದು ಮನವಿ ಮಾಡಿದರು.

ಮನವಿ ಪತ್ರ ಸ್ವೀಕರಿಸಿ ಮಾತನಾಡಿದ ಬಿಇಓ ಸುರೇಂದ್ರ ಕಾಂಬಳೆ, ಶಿಕ್ಷಕರ ಸಮಸ್ಯೆಗಳನ್ನು ಆದಷ್ಟು ಬೇಗ ಪರಿಹರಿಸಲು ಹಾಗೂ ಅರ್ಹ ಶಿಕ್ಷಕರಿಗೆ ದೊರೆಯಬೇಕಾದ ಸೇವಾ ಸೌಲಭ್ಯಗಳನ್ನು ವಿಳಂಬವಿಲ್ಲದೆ ಮಂಜೂರು ಮಾಡಲು ಕ್ರಮ ವಹಿಸುತ್ತೇನೆ ಎಂದು ತಿಳಿಸಿದರು.

ಇಂಡಿ ತಾಲೂಕಿನ ಪ್ರಾಥಮಿಕ ಶಾಲೆಗಳ ಮಕ್ಕಳ ಶೈಕ್ಷಣಿಕ ಪ್ರಗತಿಯಲ್ಲಿ ಜಿಪಿಟಿ ಶಿಕ್ಷಕರ ಪಾತ್ರ ಅತ್ಯಂತ ಮಹತ್ವದ್ದಾಗಿದ್ದು, ಮಕ್ಕಳ ಶೈಕ್ಷಣಿಕ ಅಭಿವೃದ್ಧಿ ಹಾಗೂ ಇಲಾಖೆಯ ಎಲ್ಲಾ ಯೋಜನೆಗಳ ಯಶಸ್ವಿ ಅನುಷ್ಠಾನಕ್ಕೆ ಶಿಕ್ಷಕರು ಸದಾ ಸಹಕಾರ ನೀಡಲು ತಿಳಿಸಿದರು.

ಇದೇ ಸಂದರ್ಭದಲ್ಲಿ ಶಿಕ್ಷಕರ ಸಂಘದ ಇಂಡಿ ತಾಲೂಕ ಘಟಕದ ವತಿಯಿಂದ ನೂತನ ಕ್ಷೇತ್ರ ಶಿಕ್ಷಣಾಧಿಕಾರಿ ಸುರೇಂದ್ರ ಕಾಂಬಳೆ ಅವರನ್ನು ಸನ್ಮಾನಿಸಲಾಯಿತು.

ಶಿಕ್ಷಣ ಸಂಯೋಜಕ ಎ ಸಿ ಹುಣಸಗಿ, ಎ ಜಿ ಚೌಧರಿ,ಜಿಪಿಟಿ ಸಂಘದ ರಾಜ್ಯ ಪ್ರಧಾನ ಕಾರ್ಯದರ್ಶಿ ಚಂದ್ರಶೇಖರ ಹಕಾರಿ, ಇಂಡಿ ತಾಲೂಕಾ ಎಸ್ ಸಿ ಎಸ್ ಟಿ ನೌಕರರ ಸಂಘದ ಅಧ್ಯಕ್ಷ ಆರ್ ಸಿ ವಠಾರ, ಜಿಪಿಟಿ ಸಂಘದ ತಾಲೂಕ ಪ್ರಧಾನ ಕಾರ್ಯದರ್ಶಿ ಪ್ರಭುಲಿಂಗ ಕವಟಗಿ, ಖಜಾಂಚಿ ಸಿದ್ದರಾಮ ದಾಬೆ, ಉಪಾಧ್ಯಕ್ಷ ಎನ್ ಸಿ ಪುಟಾಣಿ, ಜಿಪಿಟಿ ಶಿಕ್ಷಕರ ಸೊಸೈಟಿಯ ಅಧ್ಯಕ್ಷ ಶಶಿಕುಮಾರ ವಡ್ಡರ, ಶಿಕ್ಷಕರಾದ ಸಂತೋಷ ಬಂಡೆ, ಪ್ರಭು ನಾದ, ಹನಮಂತರಾಯ ಪೂಜಾರಿ, ಎಚ್ ಸಿ ಇಂಗಳಗಿ,ಅಕ್ಷಯ ಸೇಗಾವಿ, ಯುವರಾಜ ಪಡಗಾನವರ, ಪ್ರಶಾಂತ ಹದರಿ, ರಾಜಕುಮಾರ ಬೆಣ್ಣೆಸೂರ, ಪರಶುರಾಮ ತಳವಾರ, ಉಮೇಶ ಭಜಂತ್ರಿ, ಮಲಸಿದ್ದಪ್ಪ ತಡ್ಲಗಿ, ನೇತ್ರಾವತಿ ಖವಟಗಿ ಸೇರಿದಂತೆ ಸಂಘದ ಅನೇಕ ಪದಾಧಿಕಾರಿಗಳು ಉಪಸ್ಥಿತರಿದ್ದರು.

ಅಜ್ಞಾನದ ಕತ್ತಲೆ ಕಳೆದು ಜ್ಞಾನದ ಬೆಳಕು ಮೂಡಿಸುವ ಕಾರ್ತಿಕ ದೀಪೋತ್ಸವ

■ ಉದಯರಶ್ಮಿ ದಿನಪತ್ರಿಕೆ



ಮುದ್ದೇಬಿಹಾಳ: ಕಾರ್ತಿಕ ದೀಪೋತ್ಸವವು ಕೇವಲ ಬಾಹ್ಯ ಕತ್ತಲೆಯನ್ನು ಹೋಗಲಾಡಿಸುವುದಲ್ಲ, ನಮ್ಮ ಅಂತರಂಗದ ಅಜ್ಞಾನದ ಕತ್ತಲೆಯನ್ನು ಕಳೆದು ಜ್ಞಾನದ ಬೆಳಕನ್ನು ಮೂಡಿಸುವ ಕಾರ್ತಿಕ ದೀಪೋತ್ಸವವು ಸಂಕೇತವಾಗಿದೆ ಎಂದು ಮುಖಂಡ ಮಹಾಂತೇಶ ಪಟ್ಟಣದ ಹೇಳಿದರು.

ಪಟ್ಟಣದ ಮಾರುತಿ ನಗರದಲ್ಲಿರುವ ಸದ್ಗುರು ಯಲ್ಲಾಲಿಂಗೇಶ್ವರ ಮಠದ ಆವರಣದಲ್ಲಿ ಕಾರ್ತಿಕ ಮಾಸದ ನಿಮಿತ್ಯ ಹಮ್ಮಿಕೊಳ್ಳಲಾಗಿದ್ದ ಕಾರ್ತಿಕೋತ್ಸವದ 9ನೇ ದಿನದ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು. ಯಲ್ಲಾಲಿಂಗೇಶ್ವರ ಮಠವು ಕೇವಲ ಧಾರ್ಮಿಕ ಕೇಂದ್ರವಾಗಿರದೆ, ಸಮಾಜದಲ್ಲಿ ನೀತಿ, ಸಂಸ್ಕಾರ ಮತ್ತು ಸಮಾನತೆಯ ಸಂದೇಶವನ್ನು ಸಾರುವ ಕೇಂದ್ರವಾಗಿವೆ. ಈ ಭಾಗದ ಭಕ್ತರ ಆಧ್ಯಾತ್ಮಿಕ ಮತ್ತು ಸಾಮಾಜಿಕ ಜಾಗೃತಿಯ ಕೇಂದ್ರವಾಗಿದೆ. ಜಾತಿ–ಮತ ಭೇದವಿಲ್ಲದೆ ಸರ್ವರನ್ನೂ ಒಗ್ಗೂಡಿಸಿ ಇಂತಹ ಧಾರ್ಮಿಕ ಕೈಂಕರ್ಯಗಳನ್ನು ಆಯೋಜಿಸುತ್ತಿರುವುದು ಶ್ಲಾಘನೀಯ. ಭಕ್ತರು ಸ್ವಪ್ರೇರಣೆಯಿಂದ ಭಾಗವಹಿಸಿ ಮಠದ ಕಾರ್ಯಗಳಿಗೆ ಕೈಜೋಡಿಸುತ್ತಿರುವುದು ಉತ್ತಮ ಬೆಳವಣಿಗೆ ಎಂದರು. ನಿವೃತ್ತ ಶಿಕ್ಷಕ ಎಸ್. ಎಸ್.ಹುನಗುಂದ ಮಾತನಾಡಿ, ದೀಪವು ತನ್ನನ್ನು ತಾನು ಬೆಳಗಿಸಿಕೊಂಡು ಇತರ–ರಿಗೆ ಬೆಳಕು ನೀಡುವಂತೆ, ಮನುಷ್ಯನು ನಿಸ್ವಾರ್ಥ ಸೇವಾ ಮನೋಭಾವ ಬೆಳೆಸಿಕೊಳ್ಳಬೇಕು. ಹೊರಗಿನ ಕತ್ತಲೆಯನ್ನು ಹಣತೆ ಹೋಗಲಾಡಿಸಿದರೆ, ಗುರುವಿನ ಅನುಗ್ರಹ ಮತ್ತು ಸತ್ಸಂಗವು ಮನುಷ್ಯನ ಅಂತರಂಗದ ಅಜ್ಞಾನ ಹಾಗೂ ಅಹಂಕಾರದ ಕತ್ತಲೆಯನ್ನು ಕಳೆದು ಸುಜ್ಞಾನದ ಬೆಳಕನ್ನು ತುಂಬುತ್ತದೆ. ಅದರಂತೆ ಯಲ್ಲಾಲಿಂಗೇಶ್ವರರ ತತ್ವ–ಬೋಧನೆಗಳನ್ನು ಜೀವನದಲ್ಲಿ ಅಳವಡಿಸಿಕೊಂಡಾಗ ಬದುಕು ಸಾರ್ಥಕ ವಾಗುತ್ತದೆ ಎಂದರು. ಶಿಕ್ಷಕ ಎಂ.ಬಿ.ಗುಡಗುಂಟಿ ಮಾತನಾಡಿದರು. ಅಂದು ಬ್ರಾಹ್ಮೀ ಮುಹೂರ್ತದಿಂದಲೇ ಮಠದಲ್ಲಿ ವಿವಿಧ ಧಾರ್ಮಿಕ ವಿಧಿವಿಧಾನಗಳು ನೆರವೇರಿದವು. ಯಲ್ಲಾಲಿಂಗೇಶ್ವರರ ಕರ್ತೃ ಗದ್ದುಗೆಗೆ ಪಂಚಾಮೃತ ಅಭಿಷೇಕ, ಕ್ಷೀರಾಭಿಷೇಕ, ಏಕಾದಶ ರುದ್ರಾಭಿಷೇಕ ಹಾಗೂ ಸಹಸ್ರ ಬಿಲ್ವಾರ್ಚನೆ ನೆರವೇರಿಸಲಾಯಿತು. ಗದ್ದುಗೆಯನ್ನು ವಿವಿಧ ಬಗೆಯ ಸುಗಂಧಭರಿತ ಹೂವುಗಳಿಂದ ಆಕರ್ಷಕವಾಗಿ ಅಲಂಕರಿಸಲಾಗಿತ್ತು. ಮಠದ ಆವರಣದೆಲ್ಲೆಡೆ ತಳಿರು ತೋರಣ ಹಾಗೂ ವಿದ್ಯುತ್ ದೀಪಾಲಂಕಾರ ಮಾಡಲಾಗಿತ್ತು. ಸಂಜೆಯಾಗುತ್ತಿದ್ದಂತೆ ಮಠದ ಆವರಣದಲ್ಲಿ ಹಬ್ಬದ ವಾತಾವರಣ ನಿರ್ಮಾಣವಾಗಿ–ತ್ತು. ಮಹಿಳೆಯರು, ಮಕ್ಕಳು ಹಾಗೂ ಭಕ್ತಾದಿಗಳು ಮಠದ ಪ್ರಾಂಗಣ, ಗದ್ದುಗೆಯ ಸುತ್ತಲೂ ಹಾಗೂ ದೀಪಸ್ತಂಭಗಳಲ್ಲಿ ಸಾಲು–ಸಾಲು ಮಣ್ಣಿನ ಹಣತೆಗಳನ್ನು ಬೆಳಗಿ ಭಕ್ತಿ ಸಮರ್ಪಿಸಿದರು. ಸಾವಿರಾರು ದೀಪಗಳ ಬೆಳಕಿನಲ್ಲಿ ಶ್ರೀಮಠದ ಆವರಣವು ದಿವ್ಯ ಕಳೆಯಿಂದ ಕಂಗೊಳಿಸುತ್ತಿತ್ತು.

ಉಪನ್ಯಾಸಕ ಪ್ರಕಾಶ ನರಗುಂದ, ನಾಗಪ್ಪ ಸುಡುಗಾಡ ಸಿದ್ಧ, ನಾಗೇಶ ಭಜಂತ್ರಿ, ನಾಗಪ್ಪ ಧನಗೊಂಡ, ಶಿವಪ್ಪಣ್ಣ ಪಡದಾಳಿ, ವಾಸುದೇವ ಚಿತ್ರಗಾರ, ಬಿ.ಎಂ.ನಾಯ್ಕೋಡಿ, ಡಿ.ಪಿ.ಬಿರಾದಾರ, ಭೀಮು ಬಳವಾಟ, ಎಸ್.ಎ

ಗೊಂದಲಗಳಿಗೆ ಕಿವಿಗೊಡಬೇಡಿ :ಸುಣಗಾರ

■ ಉದಯರಶ್ಮಿ ದಿನಪತ್ರಿಕೆ

ದೇವರಹಿಪ್ಪರಗಿ: ಕಾಂಗ್ರೆಸ್ ಕಾರ್ಯಕರ್ತರು ಯಾವುದೇ ಗೊಂದಲಗಳಿಗೆ ಕಿವಿಗೊಡದೇ ಪಕ್ಷದ ವರಿಷ್ಠರ ಆದೇಶ ಪಾಲಿಸಬೇಕು ಎಂದು 2023 ರ ಚುನಾವಣೆಯ ಕಾಂಗ್ರೆಸ್ ಅಭ್ಯರ್ಥಿ ಶರಣಪ್ಪ ಸುಣಗಾರ ಮನವಿ ಮಾಡಿದ್ದಾರೆ.

ಪತ್ರಿಕೆಗೆ ಈ ಕುರಿತು ಶನಿವಾರ ಪತ್ರಿಕಾ ಪ್ರಕಟಣೆ ನೀಡಿರುವ ಅವರು, ವಿಜಯಪುರ ಜಿಲ್ಲಾ ಕಾಂಗ್ರೆಸ್ ಸಮಿತಿ ವ್ಯಾಪ್ತಿಯಲ್ಲಿ ದೇವರಹಿಪ್ಪರಗಿ ವಿಧಾನಸಭಾ ಕ್ಷೇತ್ರದ ಪಕ್ಷ ಸಂಘಟನೆಗೆ ಸಂಬಂಧಿಸಿದಂತೆ 2023ರ ಚುನಾವಣೆಯಲ್ಲಿ ಆಕಾಂಕ್ಷಿಗಳ ಸಮಿತಿ ರಚಿಸಲಾಗಿತ್ತು ಎಂದು ಕೆಲವು ಸ್ಥಳೀಯ ಮುಖಂಡರು ಹೇಳುತ್ತಿರುವುದು ತಿಳಿದು ಬಂದಿದೆ. ಆದರೆ ವಾಸ್ತವವಾಗಿ ಈ ರೀತಿಯಾದ ಯಾವುದೇ ಆಕಾಂಕ್ಷಿಗಳ ಸಮಿತಿ ಅಸ್ತಿತ್ವದಲ್ಲಿ ಇಲ್ಲ ಎಂದು ಈ ಮೂಲಕ ದೃಢೀಕರಿಸಲಾಗಿದೆ.

ಕ್ಷೇತ್ರದಲ್ಲಿ ಪಕ್ಷ ಸಂಘಟನೆಗೆ ಸಂಬಂಧಿಸಿದಂತೆ 2023ರ ವಿಧಾನಸಭಾ ಅಭ್ಯರ್ಥಿ, ಡಿಸಿಸಿ ಅಧ್ಯಕ್ಷರು, ಬ್ಲಾಕ್ ಕಾಂಗ್ರೆಸ್ ಸಮಿತಿ ಅಧ್ಯಕ್ಷರು, ಜಿಲ್ಲಾ ಉಸ್ತುವಾರಿ ಸಚಿವರು ಹಾಗೂ ಇತರ ಸ್ಥಳೀಯ ಮುಖಂಡರು ನಿರ್ವಹಿಸಲಿದ್ದಾರೆ ಎಂದು ಹೇಳಿದ್ದಾರೆ.

ನ.24ರಂದು ಶಿಕ್ಷಕರಿಗೆ ಸಹಪಠ್ಯ ಚಟುವಟಿಕೆಗಳ ಸ್ಪರ್ಧೆ

■ ಉದಯರಶ್ಮಿ ದಿನಪತ್ರಿಕೆ

ವಿಜಯಪುರ: ಕರ್ನಾಟಕ ರಾಜ್ಯ ಶಿಕ್ಷಕರ ಕಲ್ಯಾಣ ನಿಧಿ ವತಿಯಿಂದ ಪ್ರಾಥಮಿಕ ಹಾಗೂ ಪ್ರೌಢಶಾಲಾ ಶಿಕ್ಷಕರಿಗೆ ಪ್ರತ್ಯೇಕವಾಗಿ ಸಹಪಠ್ಯ ಚಟುವಟಿಕೆಗಳ ಸ್ಪರ್ಧೆಗಳನ್ನು ನ.24ರಂದು ಬೆಳಿಗ್ಗೆ 9 ಗಂಟೆಗೆ ನಗರದ ಕೆ.ಎಚ್.ಬಿ. ಕಾಲೋನಿಯ ಸೋಲಾಪುರ ರಸ್ತೆಯಲ್ಲಿರುವ ಗೀತಾಂಜಲಿ ಮಾದರಿ ಪ್ರಾಥಮಿಕ ಹಾಗೂ ಪ್ರೌಢ ಶಾಲೆಯಲ್ಲಿ ಆಯೋಜಿ ಸಲಾಗಿದೆ. ನಗರ ವಲಯದ ಸರ್ಕಾರಿ, ಅನುದಾನಿತ ಹಾಗೂ ಅನುದಾನರಹಿತ ಪ್ರಾಥಮಿಕಮತ್ತುಪ್ರೌಢಶಾಲೆಗಳಶಿಕ್ಷಕರುಸ್ಪರ್ಧೆಯಲ್ಲಿ ಭಾಗವಹಿಸ ಬಹುದಾಗಿದ್ದು, ಅಂದು ಬೆಳಿಗ್ಗೆ 9 ಗಂಟೆಯೊಳಗೆ ತಾಲೂಕು ಸಹಪಠ್ಯ ಚಟುವಟಿಕೆಗಳ ಸ್ಪರ್ಧೆಗಳ ನೋಡಲ್ ಅಧಿಕಾರಿ ಶ್ರೀಮತಿ ಪಿ.ಜಿ. ಹಿರೇಮಠ ಅವರ ಬಳಿ ವರದಿ ಮಾಡಿಕೊಳ್ಳಲು ಸೂಚಿಸಲಾಗಿದೆ ಎಂದು ನಗರ ವಲಯ ಕ್ಷೇತ್ರ ಶಿಕ್ಷಣಾಧಿಕಾರಿಗಳ ಪ್ರಕಟಣೆ ತಿಳಿಸಿದೆ.

ಪಿಎಚ್.ಡಿ ವಿದ್ಯಾರ್ಥಿಗಳಿಗೆ ಮಾಸಿಕ ಫೆಲೋಶಿಪ್ :ಅರ್ಜಿ ಆಹ್ವಾನ

■ ಉದಯರಶ್ಮಿ ದಿನಪತ್ರಿಕೆ

ವಿಜಯಪುರ: 27ನೇ ಸಾಲಿನಲ್ಲಿ ಪ್ರಥಮ ವರ್ಷದ ಪೂರ್ಣಾವಧಿ ಪಿಎಚ್.ಡಿ ಅಧ್ಯಯನ ಆರಂಭಿಸಿರುವ ಕರ್ನಾಟಕದ ಹಿಂದುಳಿದ ವರ್ಗಗಳ ಪ್ರವರ್ಗ–I, II(J), III(J) ಹಾಗೂ III(©)ಗೆ ಸೇರಿದ ಅರ್ಹ ಹೊಸ ಅಭ್ಯರ್ಥಿಗಳಿಂದ ಮಾಸಿಕ ವ್ಯಾಸಂಗ ವೇತನ/ಫೆಲೋಶಿಪ್‌ಗಾಗಿ ಆನ್‌ಲೈನ್ ಮೂಲಕ ಅರ್ಜಿ ಆಹ್ವಾನಿಸಲಾಗಿದೆ. ಅಭ್ಯರ್ಥಿಗಳು 2026ರ ಜನವರಿ 9ರಂದು ಅಥವಾ ತದನಂತರ ಅಧ್ಯಯನ ಆರಂಭಿಸಿರಬೇಕು. ಅರ್ಹರು ಇಲಾಖೆಯ ವೆಬ್‌ಸೈಟ್ https://bcwd.karnataka.gov.in ಮೂಲಕ ಡಿಸೆಂಬರ್ 17ರ ಸಂಜೆ 5.30ರೊಳಗೆ ಅರ್ಜಿ ಸಲ್ಲಿಸಬಹುದು.

ಹೆಚ್ಚಿನ ಮಾಹಿತಿಗೆ ಸಹಾಯವಾಣಿ ಸಂಖ್ಯೆ 8050770004 ಸಂಪರ್ಕಿಸಬಹುದು ಎಂದು ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ಜಿಲ್ಲಾ ಅಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.



ಅಂತರರಾಷ್ಟ್ರೀಯ ದತ್ತು ಮಾಸಾಚರಣೆ ಅರಿವು ಕಾರ್ಯಕ್ರಮ

■ ಉದಯರಶ್ಮಿ ದಿನಪತ್ರಿಕೆ

ನಿಡಗುಂದಿ: ಜಿಲ್ಲಾ ಮಕ್ಕಳ ರಕ್ಷಣಾ ಘಟಕ ವಿಜಯಪುರ ವತಿಯಿಂದ ಪಟ್ಟಣದಲ್ಲಿ ಅಂತರರಾಷ್ಟ್ರೀಯ ದತ್ತು ಮಾಸಾಚರಣೆ ಅಂಗವಾಗಿ ಶನಿವಾರ ಜಾಗೃತಿ ಕಾರ್ಯಕ್ರಮ ಹಮ್ಮಿಕೊಳ್ಳಲಾಯಿತು. ತಹಸೀಲ್ದಾರ್ ಕಚೇರಿ, ನಾಗಠಾಣ ಪ್ರೌಢಶಾಲೆ, ಪ್ರಾಥಮಿಕ ಆರೋಗ್ಯ ಕೇಂದ್ರ, ಪಟ್ಟಣ ಪಂಚಾಯಿತಿ ಹಾಗೂ ಬಸ್ ನಿಲ್ದಾಣಗಳಲ್ಲಿ ಈ ಕಾರ್ಯಕ್ರಮ ನಡೆಯಿತು. ಈ ಸಂದರ್ಭದಲ್ಲಿ ಮಾತನಾಡಿದ ಮೇಲ್ವಿಚಾರಕ ಸಚಿನ್ ಕಟ್ಟಿ ಅವರು, ಮಕ್ಕಳನ್ನು ಮಾರಾಟ ಮಾಡುವುದು, ಖರೀದಿಸುವುದು ಹಾಗೂ ಮಧ್ಯವರ್ತಿಗಳ ಮೂಲಕ ಅಕ್ರಮವಾಗಿ ದತ್ತು ಪಡೆಯುವುದು ಕಾನೂನುಬಾಹಿರವಾಗಿದ್ದು, ಕಾನೂನುಬದ್ಧ ದತ್ತು ಪ್ರಕ್ರಿಯೆಯನ್ನೇ ಅನುಸರಿಸಬೇಕು ಎಂದು ಹೇಳಿದರು. ಇಂತಹ ಪ್ರಕರಣಗಳು ಕಂಡುಬಂದಲ್ಲಿ ಮಕ್ಕಳ ಸಹಾಯವಾಣಿ 1098 ಅಥವಾ ತುರ್ತು ಸಹಾಯವಾಣಿ 112 ಕ್ಕೆ ಮಾಹಿತಿ ನೀಡಬೇಕು ಎಂದು ತಿಳಿಸಿದರು.

ದತ್ತು ಪ್ರಕ್ರಿಯೆ ಕುರಿತು ಹೆಚ್ಚಿನ ಮಾಹಿತಿಗಾಗಿ ಜಿಲ್ಲಾ ಮಕ್ಕಳ ರಕ್ಷಣಾ ಘಟಕದ 08352–295261 ಸಂಖ್ಯೆಗೆ ಸಂಪರ್ಕಿಸುವಂತೆ ಮನವಿ ಮಾಡಿದರು. ಕಾರ್ಯಕ್ರಮದಲ್ಲಿ ಗಂಗಾಬಾಯಿ ಹಂಗರಗಿ, ರಘುನಂದನ ಕಂಠಿ ಸೇರಿದಂತೆ ವಿವಿಧ ಇಲಾಖೆಗಳ ಅಧಿಕಾರಿಗಳು ಉಪಸ್ಥಿತರಿದ್ದರು.

ಕರ್ನಾಟಕ ಉಚ್ಚ ನ್ಯಾಯಾಲಯ, ಕಲಬುರಗಿ ಪೀಠ, ಕಲಬುರಗಿ

ಆರ್.ಎಸ್.ಎ.ನಂ: 200441/2015 (DEC/INJ)

ಬಸವ್ವ ಗ: ಛಬಣ್ಣ ಮೋಳೆ, ಮೃತ, ಅವರ ಕಾನೂನಾತ್ಮಕ ವಾರಸುದಾರರು,
1)ಸುರೇಶ ತ: ಸಿದಗೊಂಡ ಚಾವರ, ವ:43, ಉ: ಶಿಕ್ಷಣ ಇಲಾಖೆ (ಶಿಕ್ಷಕರು), ವಿಳಾಸ: ಹೊನವಾಡ ಗ್ರಾಮ, ತಾಲೂಕು ಜಿಲ್ಲೆ ವಿಜಯಪುರ.ಮತ್ತು ಇತರರು.

.....ಮೇಲ್ಮನವಿದಾರ/ರು.

ಶ್ರೀ: ಶಿವಕುಮಾರ ಕಲ್ಲೂರ, ವಕೀಲರು.

ವಿರುದ್ಧ

ಮಲ್ಲಪ್ಪ ತ: ಕಲ್ಲಪ್ಪ ಮೋಳೆ,
ವ: 63 ವರ್ಷ, ಉ:ಒಕ್ಕಲುತನ, ವಿಳಾಸ:ಹೊನವಾಡ ಗ್ರಾಮ, ತಾಲೂಕು ಜಿಲ್ಲೆ ವಿಜಯಪುರ. ಮತ್ತು ಇತರರು.

.....ಪ್ರತಿವಾದಿ/ಗಳು

ಇವರಿಗೆ: ಪ್ರತಿವಾದಿ :-

7) ಸಿದ್ದಪ್ಪ ತ: ದೇವಪ್ಪ ಮೋಳೆ, ಮೃತ, ಅವರ ಕಾನೂನಾತ್ಮಕ ವಾರಸುದಾರರು,
1) ವಿಧ್ಯಾ ಗ: ಸಿದ್ದಪ್ಪ ಮೋಳೆ,
ವ: 60 ವರ್ಷ, ಉ: ಮನೆಕೆಲಸ,
2) ಪ್ರವೀಣ ತ: ಸಿದ್ದಪ್ಪ ಮೋಳೆ,
ವ: 36 ವರ್ಷ, ಉ: ಖಾಸಗಿ ಕೆಲಸ,
3) ಅಶ್ವಿನಿ ತ: ಸಿದ್ದಪ್ಪ ಮೋಳೆ,
ವ:30 ವರ್ಷ, ಉ: ಮನೆಕೆಲಸ,
ಎಲ್ಲರ ವಿಳಾಸ: ತಿಕೋಟಾ, ಪೋಸ್ಟ ಹೊನವಾಡ, ತಾ: ತಿಕೋಟಾ, ಜ: ವಿಜಯಪುರ.

ದಿನಾಂಕ: **27.11.2015 ರಂದು** 2ನೇ ಹೆಚ್ಚುವರಿ ಜಿಲ್ಲಾ ನಾಯಾಲಯ, ವಿಜಯಪುರ, **ಆರ್.ಎ.ಸಂ.ಖ್ಯೆ: 29/2015** ರಲ್ಲಿ ಹೊರಡಿಸಲಾದ ತೀರ್ಪು/ ಅವಾರ್ಡ್ /ಆದೇಶದ ವಿರುದ್ಧ ಮೇಲಿನ ಮೇಲ್ಮನವಿಯನ್ನು ಸಲ್ಲಿಸಲಾಗಿದೆ.

ನೀವು ಮೇಲ್ಮನವಿಯನ್ನು ಪ್ರಶ್ನಿಸಲು ಬಯಸಿದರೆ, **ದಿನಾಂಕ: 04.01.2027 ರಂದು ಬೆಳಿಗ್ಗೆ 10.30 ಗಂಟೆಗೆ** ಈ ನ್ಯಾಯಾಲಯ ದಲ್ಲಿ ಖುದ್ದಾಗಿ ಅಥವಾ ಸೂಕ್ತವಾದ ಸೂಚನೆಗಳನ್ನು ಪಡೆದ ವಕೀಲರ ಮೂಲಕ ಅಥವಾ ಕಾನೂನಿನಿಂದ ನಿಮ್ಮ ಪರವಾಗಿ ಕಾರ್ಯನಿರ್ವಹಿಸಲು ಅಧಿಕಾರ ಪಡೆದ ಯಾರೊಬ್ಬರ ಮುಖಾಂತರ ಹಾಜರಾಗ ಬೇಕೆಂದು ಈ ಮೂಲಕ ಸೂಚನೆ ನೀಡಲಾಗಿದೆ. ನೀವು ಹಾಜರಾಗಲು ವಿಫಲರಾದರೆ, ನಿಮ್ಮ ಅನುಪಸ್ಥಿತಿಯಲ್ಲಿ ಮೇಲ್ಮನವಿಯನ್ನು ಪರಿಗಣಿಸಿ, ವಿಚಾರಣೆ ನಡೆಸಿ ತೀರ್ಮಾನಿಸಲಾಗುವುದು.

ನನ್ನ ಸಹಿ ಮತ್ತು ಈ ನ್ಯಾಯಾಲಯದ ಮೊಹರಿನೊಂದಿಗೆ **ದಿನಾಂಕ 16.11.2026 ರಂದು** ನೀಡಲಾಗಿದೆ.

ನ್ಯಾಯಾಲಯದ ಆದೇಶದ ಮೇರೆಗೆ
ಸಹಿ/–
ಸಹಾಯಕ ವಿಲೇಖನಾಧಿಕಾರಿಗಳು

ಕರ್ನಾಟಕ ಉಚ್ಚ ನ್ಯಾಯಾಲಯ, ಕಲಬುರಗಿ ಪೀಠ, ಕಲಬುರಗಿ

ಆರ್.ಎಸ್.ಎ.ನಂ: 200442/2015 (DEC/INJ)

ಬಸವ್ವ ಗ: ಛಬಣ್ಣ ಮೋಳೆ, ಮೃತ, ಅವರ ಕಾನೂನಾತ್ಮಕ ವಾರಸುದಾರರು,
1)ಸುರೇಶ ತ: ಸಿದಗೊಂಡ ಚಾವರ, ವ:43, ಉ: ಶಿಕ್ಷಣ ಇಲಾಖೆ (ಶಿಕ್ಷಕರು), ವಿಳಾಸ: ಹೊನವಾಡ ಗ್ರಾಮ, ತಾಲೂಕು ಜಿಲ್ಲೆ ವಿಜಯಪುರ. ಮತ್ತು ಇತರರು.

.....ಮೇಲ್ಮನವಿದಾರ/ರು.

ಶ್ರೀ: ಶಿವಕುಮಾರ ಕಲ್ಲೂರ, ವಕೀಲರು.

ವಿರುದ್ಧ

ಮಲ್ಲಪ್ಪ ತ: ಕಲ್ಲಪ್ಪ ಮೋಳೆ,
ವ: 63 ವರ್ಷ, ಉ:ಒಕ್ಕಲುತನ, ವಿಳಾಸ:ಹೊನವಾಡ ಗ್ರಾಮ, ತಾಲೂಕು ಜಿಲ್ಲೆ ವಿಜಯಪುರ. ಮತ್ತು ಇತರರು.

.....ಪ್ರತಿವಾದಿ/ಗಳು

ಇವರಿಗೆ: ಪ್ರತಿವಾದಿ :-

7) ಸಿದ್ದಪ್ಪ ತ: ದೇವಪ್ಪ ಮೋಳೆ, **ಮೃತ,** ಅವರ ಕಾನೂನಾತ್ಮಕ ವಾರಸುದಾರರು,
1) ವಿಧ್ಯಾ ಗ: ಸಿದ್ದಪ್ಪ ಮೋಳೆ,
ವ: 60 ವರ್ಷ, ಉ: ಮನೆಕೆಲಸ,
2) ಪ್ರವೀಣ ತ: ಸಿದ್ದಪ್ಪ ಮೋಳೆ,
ವ: 36 ವರ್ಷ, ಉ: ಖಾಸಗಿ ಕೆಲಸ,
3) ಅಶ್ವಿನಿ ತ: ಸಿದ್ದಪ್ಪ ಮೋಳೆ,
ವ:30 ವರ್ಷ, ಉ: ಮನೆಕೆಲಸ,
ಎಲ್ಲರ ವಿಳಾಸ: ತಿಕೋಟಾ, ಪೋಸ್ಟ ಹೊನವಾಡ, ತಾ: ತಿಕೋಟಾ, ಜ: ವಿಜಯಪುರ.

ದಿನಾಂಕ: **27.11.2015 ರಂದು** 2ನೇ ಹೆಚ್ಚುವರಿ ಜಿಲ್ಲಾ ನಾಯಾಲಯ, ವಿಜಯಪುರ, **ಆರ್.ಎ.ಸಂ.ಖ್ಯೆ: 28/2015** ರಲ್ಲಿ ಹೊರಡಿಸಲಾದ ತೀರ್ಪು/ ಅವಾರ್ಡ್ /ಆದೇಶದ ವಿರುದ್ಧ ಮೇಲಿನ ಮೇಲ್ಮನವಿಯನ್ನು ಸಲ್ಲಿಸಲಾಗಿದೆ.

ನೀವು ಮೇಲ್ಮನವಿಯನ್ನು ಪ್ರಶ್ನಿಸಲು ಬಯಸಿದರೆ, **ದಿನಾಂಕ: 04.01.2027 ರಂದು ಬೆಳಿಗ್ಗೆ 10.30 ಗಂಟೆಗೆ** ಈ ನ್ಯಾಯಾಲಯದಲ್ಲಿ ಖುದ್ದಾಗಿ ಅಥವಾ ಸೂಕ್ತವಾದ ಸೂಚನೆಗಳನ್ನು ಪಡೆದ ವಕೀಲರ ಮೂಲಕ ಅಥವಾ ಕಾನೂನಿನಿಂದ ನಿಮ್ಮ ಪರವಾಗಿ ಕಾರ್ಯನಿರ್ವಹಿಸಲು ಅಧಿಕಾರ ಪಡೆದ ಯಾರೊಬ್ಬರ ಮುಖಾಂತರ ಹಾಜರಾಗ ಬೇಕೆಂದು ಈ ಮೂಲಕ ಸೂಚನೆ ನೀಡಲಾಗಿದೆ. ನೀವು ಹಾಜರಾಗಲು ವಿಫಲರಾದರೆ, ನಿಮ್ಮ ಅನುಪಸ್ಥಿತಿಯಲ್ಲಿ ಮೇಲ್ಮನವಿಯನ್ನು ಪರಿಗಣಿಸಿ, ವಿಚಾರಣೆ ನಡೆಸಿ ತೀರ್ಮಾನಿಸಲಾಗುವುದು.

ನನ್ನ ಸಹಿ ಮತ್ತು ಈ ನ್ಯಾಯಾಲಯದ ಮೊಹರಿನೊಂದಿಗೆ **ದಿನಾಂಕ 16.11.2026 ರಂದು** ನೀಡಲಾಗಿದೆ.

ನ್ಯಾಯಾಲಯದ ಆದೇಶದ ಮೇರೆಗೆ
ಸಹಿ/–
ಸಹಾಯಕ ವಿಲೇಖನಾಧಿಕಾರಿಗಳು

ನ.27 ರಂದು ಭಕ್ತ ಕನಕದಾಸರ ಜಯಂತಿ

■ ಉದಯರಶ್ಮಿ ದಿನಪತ್ರಿಕೆ

ವಿಜಯಪುರ: ಜಿಲ್ಲಾಡಳಿತ, ಜಿಲ್ಲಾ ಪಂಚಾಯತ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಯೋಗದಲ್ಲಿ ಸಂತ ಶ್ರೇಷ್ಠ ಭಕ್ತ ಕನಕದಾಸರ ಜಯಂತಿ ಕಾರ್ಯಕ್ರಮವನ್ನು ನ.27 ರಂದು ಬೆಳಿಗ್ಗೆ 10:30 ಗಂಟೆಗೆ ನಗರದ ಕಂದಗಲ್ ಶ್ರೀ ಹನುಮಂತರಾಯ ರಂಗ ಮಂದಿರದಲ್ಲಿ ಹಮ್ಮಿ ಕೊಳ್ಳಲಾಗಿದೆ.


ಅಂದು ಬೆಳಿಗ್ಗೆ 9:30 ಗಂಟೆಗೆ ನಗರದ ಶ್ರೀ ಸಿದ್ದೇಶ್ವರ ದೇವಸ್ಥಾನದ ಆವರಣದಿಂದ ಕಂದಗಲ್ ಶ್ರೀ ಹನುಮಂತರಾಯ ರಂಗ ಮಂದಿರ ದವರೆಗೆ ಭಾವಚಿತ್ರದ ಮೆರವಣಿಗೆ ನಡಿಯಲಿದೆ.

ಕಾರ್ಯಕ್ರಮವನ್ನು ಮೂಲಸೌಲಭ್ಯ ಅಭಿವೃದ್ಧಿ ಸಚಿವ ಹಾಗೂ ಜಿಲ್ಲಾ ಉಸ್ತುವಾರಿ ಸಚಿವ ಡಾ. ಎಂ.ಬಿ.ಪಾಟೀಲ ಅವರು ಉದ್ಘಾಟಿಸುವರು. ನಗರ ಶಾಸಕ ಬಸನಗೌಡ ಪಾಟೀಲ ಯತ್ನಾಳ ಅವರು ಕಾರ್ಯಕ್ರಮದ ಅಧ್ಯಕ್ಷತೆ ವಹಿಸಲಿದ್ದಾರೆ.ಎ.ಕೆ ದಳವಾಯಿ ವಿಶೇಷ ಉಪನ್ಯಾಸ ನೀಡಲಿದ್ದಾರೆ. ಸಿದ್ದಪ್ಪ ಧನಗೊಂಡ ಹಾಗೂ ತಂಡದವರಿಂದ ಕನಕದಾಸರ ಕೀರ್ತನ ಗಾಯನ ನಡೆಸಿಕೊಡುವರು ಎಂದು ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕರ ಪ್ರಕಟಣೆ ತಿಳಿಸಿದೆ.

ಸಾಹಿತಿ ಶ್ರೀನಿವಾಸ ಜಾಲವಾದಿ & ರಮೇಶ ಕೋಟ್ಯಾಳ ಸಂಪಾದನೆಯ 'ಸಂತನೆಂದರೆ ಯಾರು' ಕವನ ಸಂಕಲನ ಬಿಡುಗಡೆ

ನ.28 ರಂದು ಕೃತಿ ಬಿಡುಗಡೆ & ಕವಿಗೋಷ್ಠಿ

■ ಉದಯರಶ್ಮಿ ದಿನಪತ್ರಿಕೆ



ವಿಜಯಪುರ: ಉತ್ತರ ಕರ್ನಾಟಕ ಯುವ ಲೇಖಕರ ವೇದಿಕೆ ಹಾಗೂ ಪ್ರಗತಿ ಶಾಲೆಯ ಸಹಯೋಗದಲ್ಲಿ ನ. 28 ರಂದು ಮುಂಜಾನೆ 10–30 ಗಂಟೆಗೆ ಇಲ್ಲಿನ ರಾಜಾಜಿನಗರದ ಪ್ರಗತಿ ಶಾಲೆಯ ಸಭಾಂಗಣದಲ್ಲಿ ಸಾಹಿತಿ ಶ್ರೀನಿವಾಸ ಜಾಲವಾದಿ ಮತ್ತು ರಮೇಶ ಕೋಟ್ಯಾಳ ಅವರ ಸಂಪಾದನೆಯ 'ಸಂತನೆಂದರೆ ಯಾರು' ಸಿದ್ಧೇಶ್ವರ ಶ್ರೀಗಳವರ ಕುರಿತು ಬರೆದ ಕವನ ಸಂಕಲನ ಬಿಡುಗಡೆ ಹಾಗೂ ಕವಿಗೋಷ್ಠಿ ಸಮಾರಂಭ ಜರುಗಲಿದೆ. ಜಮಖಂಡಿ ತಾಲೂಕಿನ ಹಲ್ಯಾಳದ ಗುರುದೇವಾಶ್ರಮದ ಹರ್ಷಾನಂದ ಸ್ವಾಮೀಜಿ ಸಾನಿಧ್ಯ ವಹಿಸುವರು. ಹಿರಿಯ ಸಾಹಿತಿ ಸಿದ್ಧಲಿಂಗ ಮನಹಳ್ಳಿ ಅಧ್ಯಕ್ಷತೆ ವಹಿಸಿ ಕೃತಿ ಬಿಡುಗಡೆ ಮಾಡುವರು. ಕಸಾಪ ಜಿಲ್ಲಾಧ್ಯಕ್ಷ ಹಾಸಿಂಪೀರ ವಾಲೀಕಾರ ಉದ್ಘಾಟಿಸುವರು. ಜಿಲ್ಲಾ ಕಸಾಪ ಗೌರವಾಧ್ಯಕ್ಷೆ ಭಾರತಿ ಪಾಟೀಲ ಕೃತಿ ಪರಿಚಯಿಸುವರು. ಹಿರಿಯ ಪತ್ರಕರ್ತ ವಾಸುದೇವ ಹೆರಕಲ್ ಅ.ಭಾ.ವೀ.ಲಿಂ. ಮಹಾ ಸಭಾದ ಜಿಲ್ಲಾಧ್ಯಕ್ಷ ವ್ಹಿ.ಸಿ.ನಾಗಠಾಣ ಹಾಗೂ ಫ.ಗು.ಹಳಕಟ್ಟಿ ಸಂಶೋಧನಾ ಕೇಂದ್ರದ ಸಂಯೋಜನಾಧಿಕಾರಿ ಡಾ. ವ್ಹಿ.ಡಿ.ಐಹೊಳ್ಳಿ ಮುಖ್ಯ ಅತಿಥಿಗಳಾಗಿ ಆಗಮಿಸುವರು. ಉತ್ತರ ಕರ್ನಾಟಕ ಯುವ ಲೇಖಕರ ವೇದಿಕೆಯ ಸಂಚಾಲಕ ಶ್ರೀನಿವಾಸ ಜಾಲವಾದಿ ಉಪಸ್ಥಿತರಿರುವರು.

ಮಧ್ಯಾಹ್ನ 12–30 ಗಂಟೆಗೆ ಕವಿಗೋಷ್ಠಿ ಜರುಗಲಿದ್ದು ಆಯ್ದ ಕವಿಗಳು ಸಿದ್ಧೇಶ್ವರ ಶ್ರೀಗಳವರ ಕುರಿತು ಬರೆದ ಕವನ ವಾಚಿಸಲಿದ್ದಾರೆ.

ಸಾಹಿತಿ ಶಂಕರ ಬೈಚಬಾಳ ಅಧ್ಯಕ್ಷತೆ ವಹಿಸುವರು. ವಿಶ್ರಾಂತ ಪ್ರಾಚಾರ್ಯ ಪ್ರೊ. ಕೆ.ಎಸ್. ಪಾಟೀಲ ಸಾಹಿತಿ ವಿವೇಕಾನಂದ ಪಾಟೀಲ ಸಂಗಮೇಶ ಬದಾಮಿ ಪತ್ರಕರ್ತ ಅನಿಲ ಹೊಸಮನಿ ಮುಖ್ಯ ಅತಿಥಿಗಳಾಗಿ ಆಗಮಿಸುವರು ಎಂದು ವೇದಿಕೆಯ ಕಾರ್ಯದರ್ಶಿ ಮುರುಗೇಶ ಸಂಗಮ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಉನ್ನತ ಶಿಕ್ಷಣದಿಂದ ಮಹಿಳೆಯರ ಸಬಲೀಕರಣ ಸಾಧ್ಯ :ಪ್ರೊ.ಶಾಂತಾದೇವಿ

■ ಉದಯರಶ್ಮಿ ದಿನಪತ್ರಿಕೆ



ವಿಜಯಪುರ: ಶಿಕ್ಷಣವು ಕೇವಲ ಪ್ರಮಾಣಪತ್ರಗಳಿಗೆ ಸೀಮಿತವಾಗದೆ, ಉತ್ತಮ ಜ್ಞಾನ ಮತ್ತು ಕೌಶಲ್ಯಗಳನ್ನು ರೂಪಿಸುವ ಸಾಧನವಾಗಬೇಕು. ಶಿಕ್ಷಣದಿಂದ ಮಹಿಳೆಯರಲ್ಲಿ ಆತ್ಮವಿಶ್ವಾಸ, ವ್ಯಕ್ತಿತ್ವ ವಿಕಸನ ಹಾಗೂ ಜೀವನದ ಸಮಸ್ಯೆಗಳನ್ನು ಎದುರಿಸುವ ಸಾಮರ್ಥ್ಯ ಬೆಳೆಯುತ್ತದೆ. ಉನ್ನತ ಶಿಕ್ಷಣದಿಂದಲೇ ಮಹಿಳೆಯರ ಸಬಲೀಕರಣ ಸಾಧ್ಯ ಎಂದು ಪ್ರೊ. ಶಾಂತಾದೇವಿ ಟಿ. ಹೇಳಿದರು.

ನಗರದ ಕರ್ನಾಟಕ ರಾಜ್ಯ ಅಕ್ಕಮಹಾದೇವಿ ಮಹಿಳಾ ವಿಶ್ವವಿದ್ಯಾನಿಲಯದ ರಾಜ್ಯಶಾಸ್ತ್ರ ವಿಭಾಗದ ವತಿಯಿಂದ ಪ್ರಥಮ ವರ್ಷದ ವಿದ್ಯಾರ್ಥಿನಿಯರಿಗಾಗಿ ಗುರುವಾರ ಹಮ್ಮಿಕೊಂಡಿದ್ದ "ಸ್ವಾಗತ ಸಮಾರಂಭ" ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು. ಉತ್ತರ ಕರ್ನಾಟಕದ ಮಹಿಳೆಯರು ಶೈಕ್ಷಣಿಕವಾಗಿ ಹಿಂದುಳಿದಿದ್ದು, ಅವರನ್ನು ಶೈಕ್ಷಣಿಕವಾಗಿ ಮುನ್ನೆಲೆಗೆ ತರಲು ಶಿಕ್ಷಣ ಸಹಕಾರಿಯಾಗಿದೆ. ಈ ನಿಟ್ಟಿನಲ್ಲಿ ವಿಶ್ವವಿದ್ಯಾನಿಲಯ ನಿರಂತರವಾಗಿ ಶ್ರಮಿಸುತ್ತಿದೆ. ಈ ಭಾಗದ ಮಹಿಳೆಯರು ವಿಶ್ವವಿದ್ಯಾನಿಲಯದಲ್ಲಿ ಉನ್ನತ ಶಿಕ್ಷಣ ಪಡೆಯುವ ಮೂಲಕ ಸಬಲೀಕರಣ ಹೊಂದಲು ಸಾಧ್ಯವಿದೆ ಅಷ್ಟೇ ಅಲ್ಲದೇ ವಿದ್ಯಾರ್ಥಿನಿಯರು ಗ್ರಂಥಾಲಯದ ಸೌಲಭ್ಯವನ್ನು ಹೆಚ್ಚಾಗಿ ಬಳಸಿಕೊಳ್ಳಬೇಕು. ಪುಸ್ತಕಗಳು, ಲೇಖನಗಳು ಹಾಗೂ ಡಿಜಿಟಲ್ ತಂತ್ರಜ್ಞಾನದ ಮೂಲಕ ಜ್ಞಾನವನ್ನು ವಿಸ್ತರಿಸಿಕೊಳ್ಳಬೇಕು. ವಿಶ್ವವಿದ್ಯಾನಿಲಯವು ವಿದ್ಯಾರ್ಥಿನಿಯರಿಗೆ ಹಲವು ಸೌಲಭ್ಯಗಳನ್ನು ಕಲ್ಪಿಸಿದೆ. ರಾಜ್ಯಶಾಸ್ತ್ರ ವಿಷಯದ ಅಧ್ಯಯನವು ಐಎಎಸ್, ಕೆಎಎಸ್ ಸೇರಿದಂತೆ ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ಸಹಕಾರಿಯಾಗಿದೆ. ಮಹಿಳಾ ವಿಶ್ವವಿದ್ಯಾನಿಲಯದ ವಿದ್ಯಾರ್ಥಿನಿಯರು ರಾಜ್ಯದಾದ್ಯಂತ ಗುರುತಿಸಿಕೊಳ್ಳುವಂತಹ ಸಾಧನೆ ಮಾಡಬೇಕು ಎಂದು ಸಲಹೆ ನೀಡಿದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸ